ರಚನೆ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಹಾಗಾದರೆ ಆ ಸದನದ ಸಮಿತಿಗೆ ಏನು ಕೆಲಸವಿದೆ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಸದನದ ಸಮಿತಿಯನ್ನು ಏನು ಮಾಡಿದೆ. ಅದಕ್ಕೆ ಏನಾದರೂ ಗೌರವ ಇದೆಯೇ? ನಾವು ಅದರಲ್ಲಿ ಸದಸ್ಯರಾಗಿದ್ದೇವೆ. ಸದನದ ಸಮಿತಿಯಲ್ಲಿ ಒಂದು ರೀತಿ ತೀರ್ಮಾನವಾಗುತ್ತಿದೆ, ಇನ್ನೊಂದುಕಡೆ ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ತಮ್ಮ ಒಂದು ನೀತಿಯನ್ನು ಹೇಳುತ್ತಿದ್ದೀರಿ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಿಗೆ ಈಗಾಗಲೇ ತಿಳಿದಿರುವಂತೆ ರಾಜ್ಯದಲ್ಲಿರುವ ಗ್ರಾನೈಟ್ ನಿಕ್ಷೇಪಗಳನ್ನು ಕಲ್ಲುಗಣಿ ಮಾಡಿ ಹೊರತೆಗೆದು ಸಂಸ್ಕರಿಸಿ ರಫ್ತು ಮಾಡುವ ಮತ್ತು ಅದರ ಬೆಳವಣಿಗೆಯನ್ನು ಕ್ರಮಗೊಳಿಸಿ ವೃದ್ಧಿಗೊಳಿಸುವ ಬಗ್ಗೆ ಸರ್ಕಾರವು ಮಾಡಿದ ಎಲ್ಲಾ ಪ್ರಯತ್ನಗಳು ಒಂದಲ್ಲಾ ಒಂದು ಕಾನೂನು ತೊಡಕಿನಲ್ಲಿ ಸಿಕ್ಕಿಬಿದ್ದಿವೆ. ಜೊತೆಗೆ ಗ್ರಾನೈಟ್ ಡಿಮ್ಮಿಗಳ ಅನಧಿಕೃತ ಕಲ್ಲು ಗಣಿಗಾರಿಕೆ ಹಾಗೂ ಅನಧಿಕೃತ ಸಾಗಾಣಿಕೆ ಇವುಗಳ ಬಗ್ಗೆ ಕೆಲವು ಟೀಕೆಗಳು ಆಗ್ಗಾಗೆ ಬಂದಿವೆ. ನಮ್ಮ ಸರ್ಕಾರ, ಇತ್ತೀಚೆಗೆ ಹಲವಾರು ಕ್ರಮಗಳನ್ನು ಈ ದಿಸೆಯಲ್ಲಿ ತೆಗೆದುಕೊಂಡು ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಸಾಗಾಣಿಕೆಯ ಮೇಲೆ ಪರಿಣಾಮಕಾರಿಯಾಗಿ ನಿಯಂತ್ರಣ ಸಾಧಿಸಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಸರ್ಕಾರ ಎಲ್ಲಾ ಉಪ ಖನಿಜ ನಿಕ್ಷೇಪಗಳನ್ನು ಸರಿಯಾದ ರೀತಿಯಲ್ಲಿ ಬಳಸಲು ಒಂದು ಸಮಂಜಸವಾದ ನೀತಿಯನ್ನು ರೂಪಿಸಿ ಸರ್ಕಾರಕ್ಕೆ ಸಲಹೆ ನೀಡಲು ಈಗಾಗಲೇ ಎರಡೂ ಸದನದ ಒಂದು ಜಂಟಿ ಸಮಿತಿಯನ್ನು ದಿನಾಂಕ 24-10-91 ರಂದು ಸರ್ಕಾರವು ರಚಿಸಿದೆ. ಈ ಸದನ ಸಮಿತಿಯು ತಮ್ಮ ಮಧ್ಯಕಾಲಿಕ ವರದಿಯನ್ನು ಸಲ್ಲಿಸಿದ್ದು ಅದರಲ್ಲಿರುವ ಸಲಹೆಗಳನ್ನು ಸರ್ಕಾರವು ಈಗಾಗಲೇ ಕಾರ್ಯರೂಪಕ್ಕೆ ತಂದಿದೆ. ಆದರೆ ಈ ಸಮಿತಿಯು ಇನ್ನು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಸಂಸ್ಕರಿಸಿದ ಗ್ರಾನೈಟ್ ಶಿಲೆಗಳನ್ನು ರಫ್ತು ಮಾಡುವ ಉದ್ದೇಶದಿಂದ ಅದರ ಸಂಬಂಧ ಕೈಗಾರಿಕೆ ಬಗ್ಗೆ ಕೇಂದ್ರ ಸರ್ಕಾರವು ಒಂದು ಎಕ್ಸ್‌ಪ್ಟ್ರೀಮ್ ಫೋಕಸ್ ಗ್ರೂಪ್ ಎಂಬ ಸಮಿತಿಗೆ ಒಪ್ಪಿಸಿದೆ. ರಾಜ್ಯದಲ್ಲಿರುವ ಗ್ರಾನೈಟ್ ಸಂಪತ್ತನ್ನು ಗಣನೆಗೆ ತೆಗೆದುಕೊಂಡು ಹಾಗೂ ಈ ಶಿಲೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿರುವ ಬೇಡಿಕೆಯನ್ನು ಅದರಲ್ಲಿಯೂ ಸಂಸ್ಕರಣೆ ಮಾಡಿದ ಗ್ರಾನೈಟ್‌ಗೆ ಇರುವ ಬೆಲೆಯನ್ನು ಆಧರಿಸಿ ಎಲ್ಲಾ ದೃಷ್ಟಿಯಿಂದಲೂ ಸಮಗ್ರವಾಗಿ ಪರಿಶೀಲಿಸಿದ ಮೇಲೆ ಒಂದು ಹೊಸ ಗ್ರಾನೈಟ್ ಗಣಿಗಾರಿಕೆಯ ನೀತಿಯನ್ನು ಈಗ ಸರ್ಕಾರವು ರೂಪಿಸಿರುವುದನ್ನು ನಾನು ತಿಳಿಸಲು ಹರ್ಷಿಸುತ್ತೇನೆ. ಈ ನೀತಿಯಲ್ಲಿನ ಮುಖ್ಯ ಉದ್ದೇಶವೇನೆಂದರೆ, ಸಂಸ್ಕರಣೆ ಮಾಡಿದ ಗ್ರಾನೈಟ್ ಶಿಲೆಗಳನ್ನೇ ರಫ್ತು ಮಾಡುವುದು. ಅದಕ್ಕೆ ಹೆಚ್ಚಿನ ಬೆಲೆ ಮತ್ತು ಅದರಿಂದ ದೇಶಕ್ಕೆ ಹೆಚ್ಚು ವಿದೇಶೀನಿಮಯಗಳಿಸುವ ಉದ್ದೇಶವೇ ಆಗಿದೆ. ಇದನ್ನು ಸಾಧಿಸಲು ಕಲ್ಲು ಗಣಿ ಗುತ್ತಿಗೆಗಳಿಗೆ ನೀಡುವ ಅವಧಿಯ ಸಾಕಷ್ಟು ಜಾಸ್ತಿ ಕಾಲಾವಕಾಶ ಇರಬೇಕಾಗುತ್ತದೆ. ಹಾಗೂ ಇದೇ ಸಮಯದಲ್ಲಿ ಶಾಸನ ಮತ್ತು ಸ್ಥಿರ

ತೆರಿಗೆಯನ್ನು ಸಮನ್ವಯಾಕರಣಗೊಳಿಸಬೇಕಾಗುತ್ತದೆ. ಸಾರ್ವಜನಿಕ ಉದ್ದಿಮೆ ಜಂಟಿ ಉದ್ದಿಮೆ, ಸಹಕಾರ ಉದ್ದಿಮೆ ಮತ್ತು ಖಾಸಗಿ ಉದ್ದಿಮೆಗಳಿಗೆ ರಾಜ್ಯದಲ್ಲಿ ಗ್ರಾನೈಟ್ ಕಲ್ಲು ಸಂಸ್ಕರಣ ಕೈಗಾರಿಕೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಲಾಗುವುದು. ಸರ್ಕಾರವು ಗಣಿಗುತ್ತಿಗೆ ನೀಡುವ ವಿಷಯದಲ್ಲಿ ಇದಕ್ಕೆ ಸಂಬಂಧಿಸಿದ ನಿಯಮಾವಳಿಗಳಿಗೆ ಸರಿಯಾದ ಬದಲಾವಣೆ ತಂದು ಅನಧಿಕೃತ ಕಾರ್ಯಗಳು ನಡೆಯದಂತೆ ನೋಡಿಕೊಳ್ಳುವುದು. ಗುತ್ತಿಗೆ ಪಡೆಯಲು ಸಲ್ಲಿಸುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಒಂದು ಅಧಿಕೃತ ಸಮಿತಿಯನ್ನು ರೂಪಿಸಲು ಪರಿಶೀಲಿಸಲಾಗುವುದು. ಕಲ್ಲು ಸಾಗಾಣಿಕೆ ಮಾಡುವಾಗ ಒಪ್ಪಂದ ಪಡೆದೇ ಸಾಗಣೆ ಮಾಡಬೇಕೆಂಬ ಸಧ್ಯದ ನೀತಿ ಮುಂದುವರಿಯುವುದು. ಪಟ್ಟಾ ಭೂಮಿಗಳಲ್ಲಿ ಕಲ್ಲು ಗಣಿ ಮಾಡುವುದಕ್ಕೆ ಪಟ್ಟಾದಾರರಿಗೆ ಅವರು ಸಲ್ಲಿಸುವ ಅರ್ಜಿಗಳಿಗೆ ಆದ್ಯತೆ ನೀಡುವುದು. ಪರಿಸರವನ್ನು ಕಾಪಾಡುವ ಸದುದ್ದೇಶದಿಂದ ಕಲ್ಲು ಗಣಿ ಗುತ್ತಿಗೆ ನೀಡುವುದಕ್ಕೆ ಪರಿಸರ ಮತ್ತು ಅರಣ್ಯ ಇಲಾಖೆಯವರಿಂದ ಅನುಮತಿ ಪತ್ರ ಇರಲೇಬೇಕೆಂಬ ನಿಬಂಧನೆ ಮಾಡಲಾಗುವುದು. ಕಲ್ಲುಗಣಿ ಗುತ್ತಿಗೆ ವಿಸ್ತೀರ್ಣದ ಮೇಲೆ ಒಂದು ಮಿತಿಯನ್ನು ನಿಗಧಿಪಡಿಸಿ ಅದರ ಮೂಲಕ ಹೆಚ್ಚು ಜನರು ಈ ಉದ್ಯಮದಲ್ಲಿ ತೊಡಗುವಂತೆ ಉತ್ತೇಜನ ನೀಡಲಾಗುವುದು.

ಸರ್ಕಾರದ ಈ ಹೊಸ ಗ್ರಾನೈಟ್ ನೀತಿಯನ್ನು ಎಲ್ಲಾ ಸದಸ್ಯರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ. ಹಾಗೆ ಮಾಡುವುದರಿಂದ ರಾಜ್ಯದ ಗ್ರಾನೈಟ್ ಸಂಪನ್ಮೂಲವನ್ನು ಯೋಗ್ಯ ರೀತಿಯಲ್ಲಿ ಬಳಸಲು ಸಂಶಯ ಮಾಡಿದಂತಾಗುವುದು. ಹಾಗೂ ಅದರಿಂದ ರಾಜ್ಯದಲ್ಲಿ ಗ್ರಾನೈಟ್ ಕಲ್ಲು ಸಂಸ್ಕರಣಾ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು. ಜೊತೆಗೆ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಆದಾಯವನ್ನು ಪಡೆದುಕೊಳ್ಳಲು ಸಹಕರಿಸಿದಂತಾಗುತ್ತದೆ.

ಸರ್ಕಾರವು ಮೇಲೆ ತಿಳಿಸಿದಂತೆ ನಿಯಮಾವಳಿಗಳನ್ನು ರಚಿಸಿ ಜಾರಿಗೊಳಿಸಲಾಗುವುದು. ಆದರೆ ಸದನ ಸಮಿತಿಯು ನೀಡುವ ಶಿಫಾರಸ್ಸುಗಳಿಗೆ ಹೆಚ್ಚಿನ ಆದ್ಯತೆ ನೀಡುವುದು. ಅದಕ್ಕೆ ಸಂಬಂಧಿಸಿದಂತೆ ಸೂಕ್ತ ತಿದ್ದುಪಡಿಗಳನ್ನು ನಿಯಮಾವಳಿಗಳಲ್ಲಿ ಮಾಡಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಾವು ನಮ್ಮ ರಕ್ಷಣೆಗೆ ಬರಬೇಕು. ತಾವೇ ಸದನದ ಸಮಿತಿಯನ್ನು ಮಾಡಿದ್ದೀರಿ, ಸದನದ ಸಮಿತಿಯಲ್ಲಿ ಇದರ ರೀತಿನೀತಿಗಳು ಇನ್ನೂ ತೀರ್ಮಾನವಾಗುವುದಕ್ಕೆ ಮುಂಚೆಯೇ ಸರ್ಕಾರದ ನೀತಿಯನ್ನು ಪ್ರಕಟಣೆ ಮಾಡುತ್ತಿದ್ದಾರೆ. ಇದು ಏನು ಸ್ವಾಮಿ?

ಶ್ರೀ ಆರ್.ಎನ್. ನಾಯಕ್ : ಕುಳಿತುಕೊಳ್ಳಿರಿ.

ಶ್ರೀ ವಾಟಾಳ್ ನಾಗರಾಜ್ : ನಾನು ಕುಳಿತುಕೊಳ್ಳಬೇಕೇ? ಸ್ವಾಮಿ, ವಿಪ್‌ರವರೇ ನಿಮ್ಮ ಸದಸ್ಯರಿಗೆ ಬುದ್ಧಿ ಕಲಿಸಿ. ಇವತ್ತು ಬೆಳಿಗ್ಗೆಯಿಂದ ರಾಜ್ಯದ ಜನರು ನಿಮ್ಮನ್ನು ನೋಡಿದ್ದಾರೆ. ಇನ್ನೂ ಅವರಿಗೆ ಬುದ್ಧಿ ಬಂದಿಲ್ಲ ಎಂದರೆ ಹೇಗೆ? ಇವರು ಏನು ಹೇಳಿದರು ಎಂಬುದು ನಮಗೆ ಅರ್ಥವಾಗಲಿಲ್ಲ. ನೀವು ಸ್ವಲ್ಪ ಹೇಳಿ. ಆಮೇಲೆ ಇವರ ಈ ಹೇಳಿಕೆಗೆ ಯಾರ ಸಹಿ ಇದೆ ಎಂದು ಕೇಳಿ ಸ್ವಾಮಿ; ಇದು ಏನು? ಇದನ್ನು ಕಸದ ಬುಟ್ಟಿಗೆ ಹಾಕಬೇಕೇ ಅಥವಾ ಎಲ್ಲಿಗೆ ಹಾಕಬೇಕು ಎಂದು

ಸ್ವಲ್ಪ ನೋಡಿ. ಈ ಹೇಳಿಕೆಗೆ ಯಾರ ಸಹಿ ಇದೆ? ಈ ರೀತಿ ನೋಟೀಸ್ ಹಂಚಬೇಕಾದರೆ ಯಾರು ಸಹಿ ಮಾಡಿದ್ದಾರೆ ಅವರೇ ಬಂದು ಹೇಳಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇದು ಗೌರವ ತರತಕ್ಕಂಥದ್ದಲ್ಲ ; ಯಾರದ್ದೂ ಸಹಿ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಯ್ಯೋ ರಾಮ, ನಿಮಗೆ ಇನ್ನೂ ಸಹಿ ಬಗ್ಗೆ, ಹೇಳಿಕೆ ಬಗ್ಗೆ ಇರುವ ಮಹತ್ವವೇ ಗೊತ್ತಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಸರ್ಕಾರ ಇಷ್ಟೊಂದು ಬೇಜವಾಬ್ದಾರಿಯಿಂದ ಸದಸ್ಯರಿಗೆ ಇದೊಂದು ಸ್ಟೇಟ್‌ಮೆಂಟ್ ಎಂದು ಹೇಳಿ ಹಂಚಿದೆ, ಇದಕ್ಕೆ ಯಾರದ್ದೂ ಸಹಿ ಇಲ್ಲ. ಇದರಿಂದ ಇವರು ಬೇಜವಾಬ್ದಾರಿ ಕೆಲಸ ಮಾಡುತ್ತಿದ್ದಾರೆಂದು ಹೇಳಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾವು ನಮಗೆ ಒಂದೇ ಒಂದು ನಮ್ಮ ರಕ್ಷಣೆಗೆ ಬರಬೇಕಾಗಿರತಕ್ಕಂಥದ್ದು ಅಂದರೆ ಸದನದ ಸಮಿತಿಯನ್ನು ಈ ಬಗ್ಗೆ ರಚಿಸಲಾಗಿದೆ. ನಾವು ಸದನದ ಸಮಿತಿಯ ರಿಪೋರ್ಟನ್ನು ಕೊಡುವುದಕ್ಕೆ ಮುಂಚೆ, ಸರ್ಕಾರದ ಒಂದು ನೀತಿಯನ್ನು ಪ್ರಕಟನೆ ಮಾಡುತ್ತಿರತಕ್ಕಂಥದ್ದು ಏನಿದೆ, ಇದು ಒಂದು ರೀತಿಯ ಅಕ್ಷಮ್ಯ ಅಪರಾಧವಾಗುತ್ತಿದೆ. ದಯವಿಟ್ಟು ಸರ್ಕಾರಕ್ಕೆ ಯಾವ ಸಮಯದಲ್ಲಿ ಮಂತ್ರಿಗಳು ಹೇಳಿಕೆ ಕೊಡಲಿಕ್ಕೆ ಅವಕಾಶವಿದೆ ಎಂಬುದರ ಬಗ್ಗೆ ತಾವು ಕಾನೂನು ಮಾಡಿ. ಆದರೆ ಇಲ್ಲಿ ಒಂದು ಸಮಿತಿ ಇರಬೇಕಾದರೆ ಫೈನಲ್ ರಿಪೋರ್ಟ್ ನಾವು ಕೊಡುವುದಕ್ಕೆ ಮುಂಚೆ, ಸರ್ಕಾರದವರು ತಮ್ಮ ನೀತಿಯನ್ನು ಪ್ರಕಟಣೆ ಮಾಡಿದರೆ ಆ ಸಮಿತಿ ಏತಕ್ಕೆ ಇರಬೇಕು? ಅದನ್ನು ರದ್ದು ಮಾಡಿ, ಅದಕ್ಕೆ ಬೆಲೆ ಇಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದಕ್ಕೆ ಒಂದು ಸರಿಯಾದಂಥ ವಿವರಣೆಯಾದರೂ ಕೊಡಬೇಕು. ಏತಕ್ಕೆಂದರೆ ಇದು ನಮಗೆ ಅರ್ಥವಾಗುತ್ತಿಲ್ಲ. ಸ್ವಲ್ಪ ಅರ್ಥವಾಗುವಂತೆ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ಈ ಹೇಳಿಕೆಯನ್ನು ಕೊಡುವುದಕ್ಕೆ ಮುಂಚೆ ನಮಗೆ ಏನಾದರೂ ಇದರ ಬಗ್ಗೆ ಮಾಹಿತಿಯನ್ನು ಕೊಡಬೇಕಾಗಿತ್ತು. ನಾವು ಈ ರೀತಿ ಸರ್ಕಾರದವರು ಏನೋ ಒಂದು ನಿರ್ಧಾರ ಮಾಡುತ್ತಿದ್ದೇವೆ. ಒಂದು ಹೇಳಿಕೆಯನ್ನು ಕೊಡುತ್ತಿದ್ದೇವೆ, ಎಂದು ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಏನಾದರೂ ಹೇಳಬೇಕಲ್ಲಾ; ಏನೂ ಇಲ್ಲ; ನನ್ನದೊಂದು ಹೇಳಿಕೆಯನ್ನು ಕೊಡಬೇಕೆಂದು ಅವರು ಎದ್ದರು. ಒಂದೇ ಸಮನೆ ಹೇಳಿಕೆಯನ್ನು ಓದಿದರು. ಆ ಹೇಳಿಕೆಗೆ ಸಹಿ ಇಲ್ಲ, ಹೋಗಲಿ. ಅವರು ಹೇಳಿದ್ದಾರೆಂದು ನಾವು ತೀರ್ಮಾನ ಮಾಡಿಕೊಂಡು ಅದರ ಬಗ್ಗೆ ಬಿಟ್ಟುಬಿಡೋಣ. ಯಾವ ಕರ್ಮಕ್ಕೋಸ್ಕರ, ಯಾವ ಪುರುಷಾರ್ತಾಕ್ಕೋಸ್ಕರ, ಇದರಿಂದ ಏನು ಅನುಕೂಲತೆಗಳಿವೆ ಎಂಬುದನ್ನು

ಹೇಳಬೇಡವೇ? ಸುಮ್ಮನೆ ಅವರ ಇಲಾಖೆಯವರು ಒಂದು ಹೇಳಿಕೆಯನ್ನು ಕೊಟ್ಟುರು; ಇಲ್ಲಿ ತಂದು ಓದಿದರು. ಸಚಿವರು ಮೊದಲು ಈ ಹೇಳಿಕೆಯನ್ನು ಈ ಕಾರಣಕ್ಕೋಸ್ಕರ ಹೇಳುತ್ತಿದ್ದೇನೆ. ಇಂತಿಂಥ ಕಾರಣದಿಂದ ನಾನು ಒಂದು ಹೇಳಿಕೆಯನ್ನು ಮಾಡುತ್ತಿದ್ದೇನೆಂದು ಅವರು ಅದನ್ನು ಸ್ಪಷ್ಟಪಡಿಸಬೇಕಲ್ಲ; ಸರ್ಕಾರದ ನೀತಿಯನ್ನು ಹೇಳಬೇಕಲ್ಲಾ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಬಗ್ಗೆ ಒಂದು ಹೇಳಿಕೆಯನ್ನು ಇಲ್ಲಿ ಬಂದು ಓದತಕ್ಕಂಥದ್ದು ನಿಮ್ಮ ಒಂದು ಪರಿಪಾಠವಿದೆ. ನಾವು ಏತಕ್ಕೆ ಇಲ್ಲಿರಬೇಕು? ಈ ಸದನ ಇನ್ನು ತಾವು ತಪ್ಪು ದಾರಿಗೆ ತೆಗೆದುಕೊಂಡು ಹೋಗುತ್ತಿದ್ದೀರಿ. ಯಾವ ಉದ್ದೇಶಕ್ಕೋಸ್ಕರ ಈ ಸದನದ ಸಮಿತಿಯನ್ನು ಮಾಡಿದ್ದಾರೆ. ಈ ಒಂದು ಗ್ರಾನೈಟ್ ಲೂಟಿ ರಾಜ್ಯದಲ್ಲಿ ಏನು ನಡೆಯುತ್ತಿದೆ, ಇದನ್ನು ತಪ್ಪಿಸಬೇಕೆಂದು ಹೇಳಿ ನಿರಂತರವಾಗಿ ನಡೆಸಿದ ಮೇಲೆ ಈ ಸದನದ ಸಮಿತಿಯನ್ನು ಮಾಡಿದ್ದಾಗಿದೆ. ಆ ಸದನದ ಅಧ್ಯಕ್ಷರಾಗಿ ಮಾನ್ಯ ಮಂತ್ರಿಗಳೂ ಇದ್ದಾರೆ. ಇನ್ನೂ ಆ ಸಮಿತಿಯನ್ನು ಮುಚ್ಚಿಹಾಕಿಲ್ಲ. ಅಂಥದ್ದರಲ್ಲಿ ನೀವು ತಮ್ಮದೇ ಆದಂಥ ಒಂದು ಹೇಳಿಕೆಯನ್ನು ಕೊಡುವುದು ಸರಿಯೇ?

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಸ್ಟೇಟ್‌ಮೆಂಟ್ ಕೊಟ್ಟ ಮೇಲೆ ಸಂಕ್ಷಿಪ್ತವಾಗಿ ವಿವರಣೆಯನ್ನು ಕೊಡಲಿ. ಏನು ಉದ್ದೇಶ ನಿಮ್ಮದು ; ಏನು ಮಾಡಬೇಕೆಂದು ತಮ್ಮ ವಿಚಾರ ಇದೆ. ಸದನದ ಸಮಿತಿ ಇದೆ, ಅದರ ಬಗ್ಗೆ ನಿಮ್ಮ ವಿಚಾರವೇನು? ನೀವು ಏನು ಮಾಡಲಿಕ್ಕೆ ಹೊರಟಿದ್ದೀರೆಂದು ವಿವರಣೆ ಕೊಡಿ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ನಿನ್ನೆ ತಾನೇ ಒಂದು ಮಸೂದೆ ಪಾಸ್ ಆಗಿದೆ. ಅದರಲ್ಲಿ 107ನೇ ಸೆಕ್ಷನನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಪಂಚಾಯತ್ ರಾಜ್ ಮಸೂದೆ :

"Dangerous quarrying.- If in the opinion of a Gram Panchayat the working of any quarry or the removal of a stone, earth or other material, from the soil in any place, is dangerous to persons residing in or having legal access to the neighbourhood thereof or creates or is likely to create a nuisance, the Gram Panchayat may, by written notice ....."

ಇದು ನೀವು ಕೊಟ್ಟಿರುವುದು, ಆಯಾಯ ಗ್ರಾಮಪಂಚಾಯತಿಗಳಿಗೆ ಅವರ ಸುತ್ತಮುತ್ತಲಿರುವ ನೈಸರ್ಗಿಕ ಸಂಪತ್ತಿನ ಮೇಲೆ ಒಂದು ಅಧಿಕಾರ ಇರಬೇಕು ಮತ್ತು ತೀರ್ಮಾನವನ್ನು ತೆಗೆದುಕೊಳ್ಳವಂಥ ಒಂದು ಅವಕಾಶವನ್ನು ಕಲ್ಪಿಸುವಂಥ ಒಂದು ಕಾನೂನು ಇದೂ ಇವತ್ತು ನೀವು ಕೊಟ್ಟಿರುವ ಹೇಳಿಕೆಯಲ್ಲಿ ಪಟ್ಟಾಲ್ಯಾಂಡ್ಸ್‌ಗೆ ಆಧ್ಯತೆಯನ್ನು ಕೊಡುವಂಥ ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಇದು ಯಾವ ನಮೂನೆ ವಿಕೇಂದ್ರೀಕರಣ ಹಾಗೂ ಯಾವ ನಮೂನೆ ಆಡಳಿತ ಎಂದು ನನಗಂತೂ ಗೊತ್ತಿಲ್ಲ. ಇದನ್ನು ಸುಮ್ಮನೆ ವಾಪಸ್ ತೆಗೆದುಕೊಳ್ಳಬೇಕು. ಈ ಹೇಳಿಕೆಯನ್ನು ಮಾನ ಮರ್ಯಾದೆ ಇದ್ದರೆ ತಾವು ವಾಪಾಸ್ ತೆಗೆದುಕೊಳ್ಳಿ. ನಿನ್ನೆ ಮಾಡಿದ್ದಕ್ಕೂ ಇವತ್ತು ನೀವು ಮಾಡುತ್ತಿರುವುದಕ್ಕೂ ಏನಾದರೂ ಸಂಬಂಧ ಇದೆಯೇ?

ಎರಡೂ ಸದನಗಳ ಸಮಿತಿ ಈ ವಿಚಾರದಲ್ಲಿಯೇ ವರದಿ ನೀಡಲು ಈ ಸದನದ ತೀರ್ಪಿನಿಂದ ರಚನೆಯಾಗಿದೆ. ಅದು ಈಗಾಗಲೇ ಸಾಕಷ್ಟು ಸಭೆಗಳನ್ನು ನಡೆಸಿದೆ ; ಮತ್ತು ತಾತ್ಕಾಲಿಕ ವರದಿಯನ್ನು ಕೊಟ್ಟಿದೆ. ಆ ತಾತ್ಕಾಲಿಕ ವರದಿಯ ಆಧಾರದ ಮೇಲೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮವನ್ನು ನಾವು ಮೆಚ್ಚಿದ್ದೇವೆ. ಮೆಚ್ಚಿ ಅದನ್ನು ಸ್ವಾಗತಿಸಿದ್ದೇವೆ. ಇವತ್ತು ಬಿಲ್ ಇದ್ದುದು ಆಕ್ಟ್ ಆಗುವುದಕ್ಕೆ ಸಹಕಾರ ನೀಡಿದ್ದೇವೆ. ಈ ಸದನ ಮತ್ತು ಸದನದ ಸಮಿತಿಗಳು ನಿರ್ಭೀತಿಯಿಂದ ಕೆಲಸ ಮಾಡಬೇಕು ; ಯಾರು ಇದರ ಮೇಲೆ ಒತ್ತಡ ತರತಕ್ಕದ್ದು ಸರಿಯಲ್ಲ. ಆದರೆ ಇವತ್ತು ಸದನದ ಸಮಿತಿಯ ಮೇಲೆ ಒತ್ತಡ ತರತಕ್ಕ ಪ್ರಯತ್ನ ಸರ್ಕಾರದಿಂದ ಆಗಿದೆ. ಸದನದ ಸಮಿತಿಗೆ ಒತ್ತಡ ತಂದರೂ ಒಂದೆ, ಈ ಸಭೆಗೆ ಒತ್ತಡ ತಂದರೂ ಒಂದೆ. ಆದುದರಿಂದ ಇದು ಸದನದ ಹಕ್ಕಿನ ಚ್ಯುತಿಗೆ ಅವಕಾಶ ಮಾಡಿಕೊಟ್ಟಿದೆ. ನಾನು ಕೂಡ ಸದನದ ಸಮಿತಿಯ ಸದಸ್ಯನಾಗಿದ್ದೇನೆ. ಯಡಿಯೂರಪ್ಪನವರು, ಬಾಬುಗೌಡ ಪಾಟೀಲರು, ವಾಟಾಳ್ ನಾಗರಾಜು ಅವರು, ದೇಶಪಾಂಡೆಯವರು ಅದರಲ್ಲಿ ಇದ್ದಾರೆ. ನಾವು ಅತ್ಯಂತ ಕ್ಷಿಪ್ತವಾದ ಸಮಯದಲ್ಲಿ ವರದಿಯನ್ನು ಕೊಡಬೇಕೆಂಬ ಪ್ರಯತ್ನದಲ್ಲಿದ್ದೇವೆ. ಅಂಥ ಸಂದರ್ಭದಲ್ಲಿ ಇವೊತ್ತು ಇವರು ಈ ಸದನದ ಸಮಿತಿಯ ಮೇಲೆ ಒತ್ತಡ ತರತಕ್ಕದ್ದು ಸರಿಯಲ್ಲ. ನಮ್ಮ ಸಮಿತಿಯ ಅಭಿಪ್ರಾಯ ಈ ರೀತಿ ಇರಬೇಕಾಗುತ್ತದೆಂಬ ಒತ್ತಡವನ್ನು ಹೇರತಕ್ಕ ಪ್ರಯತ್ನ ಇಲ್ಲಿ ನಡೆಯುತ್ತಿದೆ. ಆದುದರಿಂದ ಈ ಸದನದ ರಕ್ಷಣೆಗೆ ಮತ್ತು ಸಮಿತಿಯ ರಕ್ಷಣೆಗೆ ಬರಬೇಕೆಂಬ ಮನವಿಯನ್ನು ತಮ್ಮಲ್ಲಿ ಮಾಡಿದ್ದು. ತಾವು ಮಂತ್ರಿಗಳಿಗೆ ಸೂಚನೆ ಕೊಡಬೇಕು. ಈ ಹೇಳಿಕೆಯನ್ನು ಅವರು ಬೇಷರತ್ತಾಗಿ ವಾಪಸ್ಸು ಪಡೆಯಬೇಕು ಮತ್ತು ಸದನದ ಸಮಿತಿ ನಿರ್ಭೀತಿಯಿಂದ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಮತ್ತೊಮ್ಮೆ ಬಹಳ ವಿನಯದಿಂದ ವಿನಂತಿ ಮಾಡುತ್ತೇವೆ. ಈ ರೀತಿ ಕಾರ್ಯಾಂಗ ಶಾಸಕಾಂಗದ ಮೇಲೆ ಒತ್ತಾಯ ತರತಕ್ಕದ್ದು ಸರಿಯಾದುದಲ್ಲ, ಹಾಗೂ ಒಳ್ಳೆಯ ಲಕ್ಷಣ ಅಲ್ಲವೆಂದು ಹೇಳಿ, ಈ ಹೇಳಿಕೆಯನ್ನು ವಾಪಸ್ಸು ಪಡೆಯಬೇಕೆಂದು ತಾವು ಕೂಡ ನಿರ್ದಾಕ್ಷಿಣ್ಯವಾಗಿ, ಕಾಠಿಣ್ಯವಾಗಿ ಸರ್ಕಾರಕ್ಕೆ ಹೇಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಮಂತ್ರಿಗಳು ಓದಿರತಕ್ಕ ಹೇಳಿಕೆಯ ಸಾರಾಂಶ ಇಷ್ಟೇ. ಸದನದ ಸಮಿತಿ ರಚನೆಯಾಗಿದೆ, ಅವರು ಮಧ್ಯಂತರ ವರದಿ ಕೊಟ್ಟಿದ್ದಾರೆ. ಆ ವರದಿಯನ್ನು ಅನುಷ್ಠಾನ ಮಾಡಿದ್ದೇವೆಂಬುದೇ ಅದರ ಸಾರಾಂಶ. ಅದರಲ್ಲಿ ಇನ್ನೇನೂ ಇಲ್ಲ. ಮಧ್ಯಂತರ ವರದಿಯನ್ನು ಏನು ಉಭಯ ಸದನಗಳ ಸಮಿತಿ ....

ಶ್ರೀ ಸಿ. ಬೈರೇಗೌಡ : ಈ ರೀತಿ ಸದನವನ್ನು ತಪ್ಪುದಾರಿಗೆ ಎಳೆಯತಕ್ಕದ್ದು ಸರಿಯಲ್ಲ. ಸದನದ ಸಮಿತಿ ಕೊಟ್ಟಿರತಕ್ಕ ತಾತ್ಕಾಲಿಕ ವರದಿಯನ್ನು ಆಧಾರ ಮಾಡಿ. ಇವತ್ತು ಆರ್ಡಿನೆನ್ಸ್ ಹೊರಡಿಸಿದ್ದಾರೆ. ಆ ಆರ್ಡಿನೆನ್ಸ್ ಇವತ್ತು ಪಾಸ್ ಆಗಿ ಆಕ್ಟ್ ಆಗಿದೆ. ಯಾವ ವಿಚಾರಣಕ್ಕೆ ಯಾವುದೋ ಹೇಳುತ್ತಿದ್ದೀರಿ. ಏತಕ್ಕೆ ತಪ್ಪುದಾರಿಗೆ ಎಳೆಯತಕ್ಕ ಪ್ರಯತ್ನ ಮಾಡುತ್ತಿದ್ದೀರಿ?

ಶ್ರೀ ಬಿ. ಎಸ್. ಯಡಿಯೂರಪ್ಪ : ಕಲ್ಲು ಗಣಿ ವಿಸ್ತೀರ್ಣದ ಮೇಲೆ ಒಂದು ಮಿತಿಯನ್ನು ನಿಗದಿಪಡಿಸಿ ಅದರ ಮೂಲಕ ಉದ್ಯಮದಲ್ಲಿ ತೊಡಗುವಂತೆ ಉತ್ತೇಜನ ನೀಡಲಾಗುವುದೆಂದು ವರದಿಯಲ್ಲಿ ಹೇಳಿರುವುದು ಎಲ್ಲಿದೆ?

ಶ್ರೀ ಸಿ. ಬೈರೇಗೌಡ : ಆ ವರದಿಯಲ್ಲಿ ಅದು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾವು ಕೊಟ್ಟ ಮಧ್ಯಂತರ ವರದಿಯ ಆಧಾರದ ಮೇಲೆ ಕಂದಾಯ ಸಚಿವರು ಈ ಸದನದಲ್ಲಿ ತಿದ್ದುಪಡಿ ಮಸೂದೆಯನ್ನು ಮಂಡಿಸಿ ಒಪ್ಪಿಗೆ ಪಡೆದಿದ್ದಾರೆ ; ಅದು ಬೇರೆ. ಈಗ ಸಂಸದೀಯ ವ್ಯವಹಾರಗಳ ಸಚಿವರು ಯದ್ವಾತದ್ವ ಈ ಸಭೆಯನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಇದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ಅದಕ್ಕಾಗಿ ಅವರಿಗೆ ಪ್ರಾಮಾಣಿಕವಾಗಿ ಹೇಳಿ ಎಂದು ಹೇಳಿದೆ. ಅದು ಅವರಿಗೂ ಗೊತ್ತಿಲ್ಲ. ಗಣಿ ಸಚಿವರಿಗೆ ಇದರ ವಿಚಾರ ಗೊತ್ತಿಲ್ಲ. ಅವರಿಗೆ ಅಲ್ಲಿ ಇಬ್ಬರು ಅಧಿಕಾರಿಗಳು ಕುಳಿತುಕೊಂಡು ದಾರಿ ತಪ್ಪಿಸುತ್ತಿದ್ದಾರೆ. ಅದನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಇದು ಸದನದ ಸಮಿತಿಗೆ ಮಾಡಿರತಕ್ಕ ಅಗೌರವ ಹಾಗೂ ಈ ಸದನಕ್ಕೂ ತೋರಿಸತಕ್ಕ ಅಗೌರವ. ಆದುದರಿಂದ ಕೂಡಲೇ ಈ ಹೇಳಿಕೆಯನ್ನು ವಾಪಸ್ಸು ಪಡೆಯಬೇಕು, ಇಲ್ಲದಿದ್ದರೆ ಇದು ಹಕ್ಕುಚ್ಯುತಿಗೆ ಹೋಗುತ್ತದೆ. ಇದು ಸದನದ ಸಮಿತಿಗೆ ಮಾಡಿರತಕ್ಕ ಅಗೌರವ ಎಂದು ಹೇಳಿ ಹಕ್ಕುಚ್ಯುತಿ ತರಬೇಕಾಗುತ್ತದೆ. ಮಾನ್ಯ ಸಚಿವರ ಮೇಲೆ. ಈ ಎಚ್ಚರಿಕೆಯನ್ನು ನಾನು ನಿಮಗೆ ಕೊಡುತ್ತಿದ್ದೇನೆ.

*ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಪಟ್ಟಾ ಲ್ಯಾಂಡ್ ವಿಚಾರ ಗ್ರಾನೈಟ್ ಸಮಿತಿಯಲ್ಲಿ ಬಂದ ಹಿನ್ನೆಲೆಯಲ್ಲಿ ಬಿಲ್ ಇಂಟ್ರಡ್ಯೂಸ್ ಮಾಡಿದ್ದೀರಿ. ಅದು ಆಕ್ಟ್ ಆಗುತ್ತದೆ. ಅದನ್ನು ಇಂಪ್ಲಿಮೆಂಟ್ ಮಾಡುತ್ತೀರಿ. ಇವತ್ತು ನನಗೆ ಗೊತ್ತಿದೆ, ರಿಸೋರ್ಸ್ ಮೊಬಲೈಸ್ ಆಗಬೇಕು. ಅದಕ್ಕೆ ವಿರುದ್ಧ ನಾನು ಅಲ್ಲ. ಪ್ರತಿಯೊಂದು ಸರ್ಕಾರಕ್ಕೂ ತನ್ನದೇ ಆದ ಪ್ರೋಗ್ರಾಮ್ ಇರುತ್ತದೆ. ತಮ್ಮ ಬಡ್ಜೆಟ್ ಇದೆ. ರಿಸೋರ್ಸ್ ಮೊಬಲೈಸ್ ಆಗದೇ ಇದ್ದರೆ ನಾವೇ ನಾಳೆ ಕೇಳುತ್ತೇವೆ. ಆ ಡಿಫಿಕಲ್ಟಿ ಗೊತ್ತಿದೆ. ತಾವು ಕೇವಲ ಪಟ್ಟಾಲ್ಯಾಂಡ್ ಬಗ್ಗೆ ವಾದ ಮಾಡುವುದಾದರೆ ಆ ಪ್ರಶ್ನೆ ಈಗ ಇಲ್ಲ. ಇವೊತ್ತು ಸಮಿತಿ ಅಧ್ಯಕ್ಷರು ಮಂತ್ರಿಗಳೇ ಆಗಿರುವುದರಿಂದ ಸಮಿತಿ ಏನೂ 2 ವರ್ಷ ಇರುವುದಕ್ಕಾಗುವುದಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಸಂಪನ್ಮೂಲ ಸರ್ಕಾರಕ್ಕೆ ಏನು ಬರಬೇಕೋ ಆ ದೃಷ್ಟಿಯಿಂದ ನಿರ್ಣಯ ಲಾಗು ಆಗಬೇಕಾಗುತ್ತದೆ. ಅದಕ್ಕಾಗಿ ಸಮಿತಿ ಎಷ್ಟು ದಿವಸದಲ್ಲಿ ನಿರ್ಣಯ ಮಾಡಬೇಕೆಂದು ನಿರ್ಧಾರ ಮಾಡಿದರೆ ಒಳ್ಳೆಯದಾಗುತ್ತದೆ. ಪಟ್ಟಾ ಲ್ಯಾಂಡ್ ವಿಚಾರದಲ್ಲಿ ಬಿಲ್ ಇದ್ದರೆ ಆಗಲಿ. ಅದನ್ನು ಇಂಪ್ಲಿಮೆಂಟ್ ಮಾಡಿಕೊಂಡು ಹೋಗಲಿ. ಬೇರೆ ವಿಚಾರದಲ್ಲಿ ಸಮಗ್ರ ಪಾಲಿಸಿ ತರಬೇಕಿದ್ದರೆ ಅದಕ್ಕೆ ನಮ್ಮ ವಿರೋಧ ಇಲ್ಲ. ಇವತ್ತು ಕಮಿಟಿ ಇದ್ದಾಗ ಅಲ್ಲಿ ಚರ್ಚೆ ಆಗಬೇಕು. ಅಲ್ಲಿ ಚರ್ಚೆ ಮಾಡಿ ಅದರ ಅನುಮತಿ ತೆಗೆದುಕೊಂಡು ಮಾಡಿದ್ದರೆ ಸರಿಯಾಗುತ್ತಿತ್ತು. ತಾವೇ ಅಧ್ಯಕ್ಷರಿದ್ದೀರಿ. ಎಷ್ಟು ದಿವಸದ ಒಳಗೆ ತರುತ್ತೀರಿ. ಸಮಿತಿ ಮುಂದೆ ಹೋಗುವುದಕ್ಕೆ ಆಗುವುದಿಲ್ಲ. ರಿಸೋರ್ಸ್ ಮೋಬಲೈಸ್ ಮಾಡಬೇಕಾಗುತ್ತದೆ. ಆದರೆ ಹಾಗೆ ಮಾಡುವುದಾದರೆ ಈ ರೀತಿ ಸ್ಟೇಟ್‌ಮೆಂಟ್ ಕೊಟ್ಟರೆ ಕಷ್ಟವಾಗುತ್ತದೆ. ಸಮಿತಿ ಏನು

ವರದಿ ಕೊಡುತ್ತದೋ ಅದನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದ್ದೀರಿ. ತಮ್ಮ ಚಿಂತನೆ ನನಗೆ ಗೊತ್ತು. ನಾವು ಕುಳಿತು ಸಮಾಲೋಚನೆ ಮಾಡಬಾರದು ಎಂದು ಹೇಳುವುದಿಲ್ಲ. ಆದರೆ ತಾವು ಸಮಿತಿಯಲ್ಲಿ ವಿಚಾರ ಇಟ್ಟು ಹೀಗೆ ಕಷ್ಟವಾಗುತ್ತದೆಂದು ಹೇಳಿದ್ದರೆ ಅವರೇ ಸಲಹೆ ಕೊಡುತ್ತಿದ್ದರು. ಆಯಿತು, ಈ ಪ್ರಕಾರ ಮಾಡಿ ಎಂದು ಹೇಳುತ್ತಿದ್ದರು. ಅಥವಾ ಈ ಅವಧಿಯಲ್ಲಿ ಮುಗಿಸಿಕೊಡುತ್ತೇವೆಂದು ಹೇಳುತ್ತಿದ್ದರು. ಮತ್ತೆ ಇದು ಒಂದು ತಪ್ಪು ಆಗುತ್ತದೆ. ತಾವು ಈ ಸ್ಟೇಟ್‌ಮೆಂಟ್ ವಿತ್‌ಡ್ರಾ ಮಾಡಬೇಕು. ಸಮಿತಿ ತನ್ನ ಕೆಲಸ ಮಾಡಲಿ. ಸಮಿತಿ ಏನೂ 2-3 ವರ್ಷ ನಡೆಯುವುದಿಲ್ಲ. ಕೋ-ಆಪರೇಟ್ ಮಾಡಿ ರಾಜ್ಯದ ಹಿತ ನೋಡಿಕೊಂಡು ಏನು ಅನುಕೂಲ ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಈಗ ಈ ಸಮಿತಿ ರಚನೆ ಆಗಿದೆ. ಅದರ ಒಂದು ವರದಿ ಬಂದರೆ ಸಂಪೂರ್ಣವಾದ ಒಂದು ನೀತಿಯನ್ನು ರೂಪಿಸಬೇಕೆಂದು ಸಮಿತಿಯ ವರದಿಯನ್ನು ಕಾಯುತ್ತಿದ್ದೇವೆ. ತಾತ್ಕಾಲಿಕ ವರದಿಯನ್ನು ಅವರು ಕೊಟ್ಟರು. ಅದರ ಆಧಾರದ ಮೇಲೆ ನಾವು ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ರೆಕಮೆಂಡ್ ಮಾಡಿದ್ದೇವೆ. ಈಗ ಇನ್ನು ತಾವು ಒಂದು ತಿಂಗಳ ಒಳಗೆ ವರದಿ ಕೊಡುವುದು ಇದ್ದರೆ We can wait so that ಒಂದು ಪರ್‌ಪೆಕ್ಟ್ ಆದಂಥ ನೀತಿಯನ್ನು ನಾವು ತರಲು ಸಾಧ್ಯವಾಗುತ್ತದೆ. ಆದರೆ ಏನಾಗುತ್ತದೆ ಎಂದರೆ, ತಮಗೆ ಗೊತ್ತಿದೆ ; ಎಲ್ಲಾ ಕಡೆ ಕೂಡಾ ಈಗ ಅನಧಿಕೃತವಾಗಿ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದೇವೆ. ಪಟ್ಟಾದಲ್ಲಿ ಅನಧಿಕೃತವಾಗಿ ಸರ್ಕಾರಿ ಭೂಮಿಯಲ್ಲಿ ಇದ್ದುದ್ದನ್ನು ಕೂಡ ಅಪಹರಿಸುವುದನ್ನು ಸಂಪೂರ್ಣವಾಗಿ ಅಡಳಿತಾತ್ಮಕ ಕಾರ್ಯಕ್ರಮದಿಂದ ನಾವು ನಿಲ್ಲಿಸಿದ್ದೇವೆ. ಈಗ ಅನೇಕರು ಹೈಕೋರ್ಟ್‌ಗೆ ಹೋಗಿದ್ದಾರೆ. ಅಫ್‌ಕೋರ್ಸ್, ಅವರು ಕೆಲವು ಕಂಡೀಷನ್ಸ್ ಹಾಕಿ ಲೈಸೆನ್ಸ್ ಫೀಸ್ ಕಟ್ಟಬೇಕು ಎಂದು ಷರತ್ತು ಹಾಕಿ ಕೆಲವು ಸ್ಟೇ ಕೊಟ್ಟಿದ್ದಾರೆ. ಈಗ ಅನೇಕ ಕಡೆ ಇದರ ಇಡೀ ಕೈಗಾರಿಕೆ ನಿಂತಿದೆ. ಉದ್ಯಮ ನಿಂತಿದೆ. ಸಾವಿರಾರು ಜನರು ಇವತ್ತು ಕೆಲಸ ಇಲ್ಲದೆ ... I don't mind.

(Interruptions)

ಕ್ಯಾಬಿನೆಟ್ ನಿರ್ಣಯ ಮಾಡಿಕೊಂಡು ಎಲ್ಲಾ ವಿಚಾರ ಮಾಡಿ ಯಾವುದು ಕೂಡ ಇದರಲ್ಲಿ ನಮ್ಮ ಸಂಪನ್ಮೂಲ ಹೆಚ್ಚುಮಾಡುವುದು ಮತ್ತು ಯಾವ ಆದ್ಯತೆ ಮೇಲೆ ಕೊಡಬೇಕೆಂದು ಯಾವುದೇ ರೀತಿಯಲ್ಲಿ ಸಂಸ್ಕರಣಕ್ಕೆ ಪೂರಕವಾದ್ದಕ್ಕೆ ಮಾತ್ರ ವ್ಯಾಲ್ಯೂ ಆ್ಯಡೆಡ್ ಲೈಸೆನ್ಸ್ ಕೊಡುವುದಕ್ಕೆ ಮಾತ್ರ ನಾವು ಸೀಮಿತಗೊಳಿಸಿಕೊಂಡು ಈ ರೀತಿ ಮಾಡಿದ್ದೇವೆ. ಇವತ್ತು ಕೈಗಾರಿಕೆ ಬೆಳೆಸುವುದು ಇದ್ದರೆ ಯಾವುದೇ ರೀತಿಯಲ್ಲಿ ಇದನ್ನು ರಾ ಫಾರ್ಮ್‌ನಲ್ಲಿ ರಫ್ತು ಮಾಡುವುದಕ್ಕೆ ನಾವು ಪ್ರೋತ್ಸಾಹ ಈ ರೀತಿಯಲ್ಲಿ ಕೊಟ್ಟಿಲ್ಲ. ಇನ್‌ಪ್ಯಾಕ್ಟ್ ತಾವು ಹೇಳುವುದು ಮುಖ್ಯ. ಇದರ ಬಗ್ಗೆ ಒಂದು ಸಮಿತಿ ಕೂಡ ಆಗಿದೆ. ಕ್ಯಾಬಿನೇಟ್‌ನಲ್ಲಿ ಇದನ್ನೆಲ್ಲ ನಾವು ಪರಿಶೀಲನೆ ಮಾಡಿಕೊಂಡು ಈ ಹೇಳಿಕೆಯ ಪ್ರಕಾರ ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ಕೆಳಗಿನ ಕಂಡೀಷನ್‌ಗಳಂತೆ ಗುತ್ತಿಗೆ ನೀಡಬೇಕೆಂದು ತೀರ್ಮಾನಿಸಲಾಗಿದೆ.

1. ಸರ್ಕಾರಿ ಅಂದರೆ, ಸರ್ಕಾರದ ಸಾರ್ವಜನಿಕ ಉದ್ದಿಮೆ, ಜಂಟಿ ಉದ್ದಿಮೆ ಸಹಕಾರಿ ಉದ್ದಿಮೆ ಮತ್ತು ಖಾಸಗಿ ಉದ್ದಿಮೆ.

2. ಹೊಸಮೆರಗು ಕೊಡುವ ಕೈಗಾರಿಕೆಗಳನ್ನು ರಾಜ್ಯದಲ್ಲಿ ಸ್ಥಾಪಿಸುವುದನ್ನು ಪ್ರೋತ್ಸಾಹಿಸಲು ದೀರ್ಘಾವಧಿ ಗುತ್ತಿಗೆ ತರುವಾಗ ನವೀಕರಣಗಳಿಗೆ ಅವಕಾಶ ಮಾಡಿಕೊಡುವುದು.

ಶ್ರೀ ವಾಟಾಳ್ ನಾಗರಾಜ್ : ಈ ಸಲಹೆಯನ್ನು ತಮಗೆ ಯಾರು ಕೊಟ್ಟರು?

Sri. M. Veerappa Moily : It is not the question of 'Salahe' ಸಲಹೆ ಕೊಡುತ್ತಾರೆ. it is only for processing.

ಶ್ರೀ ವಾಟಾಳ್ ನಾಗರಾಜ್ : ಸದನದ ಸಮಿತಿ ಇರುವಾಗ, ಸದನದ ಸಮಿತಿಯನ್ನು ತಾವೇ ಮಾಡಿರುವಾಗ ...

ಶ್ರೀ ಎಂ. ವೀರಪ್ಪ ಮೊಯಿಲಿ : ದಯಮಾಡಿ ಆಮೇಲೆ ಹೇಳಿ ತಾವು.

(3) ರಾಜ್ಯದಲ್ಲಿ ಬೆಲೆ ವೃದ್ಧಿಸಲು ಸ್ಥಳೀಯ ಕಾರ್ಮಿಕರಿಗೆ ಹೆಚ್ಚು ಉದ್ಯೋಗ ಕಲ್ಪಿಸುವಂತೆ ಮಾಡುವುದು.

(4) ಪರಿಸರ ಮತ್ತು ಅರಣ್ಯ ಸಂರಕ್ಷಣೆ ಕಾಯಿದೆ ವಿಧಿಗಳನ್ನು ನಿಷ್ಠೆಯಿಂದ ಅನುಸರಿಸುವುದು.

(5) ನೆರೆ ರಾಜ್ಯಗಳಲ್ಲಿ ಹಾಲಿಯಿರುವ ರಾಜಧನವನ್ನು ಗಮನದಲ್ಲಿರಿಸಿಕೊಂಡು ವಿವಿಧ ಗ್ರಾನೈಟ್‌ಗಳಿಗೆ ರಾಜ್ಯಧನವನ್ನು ನಿಗಧಿಪಡಿಸುವುದು.

(6) ಗುತ್ತಿಗೆ ಪಡೆದ ಭೂಮಿಯನ್ನು ಖನಿಜ ತೆಗೆಯದೆ ನಿಷ್ಕ್ರಿಯವಾಗಿರುವುದನ್ನು ಗಮನದಲ್ಲಿರಿಸಿಕೊಂಡು ತೆರಿಗೆ ಹೆಚ್ಚಿಸುವುದು.

(7) ರಾಜ್ಯದ ಔದ್ಯೋಗಿಕ ನೀತಿಯ ಪ್ರೋತ್ಸಾಹಿಕ ಭಂಗಿಯನ್ನು ಅನ್ವಯಿಸಿ ಸಕ್ರಮ ವೈಜ್ಞಾನಿಕ/ಗಣಿ ಕೈಗಾರಿಕೆಗೆ ಅವಶ್ಯಕವಾಗಿ ದೊರಕಿಸಬೇಕಾಗಿರುವ ಸಾಮಗ್ರಿ ಹಾಗೂ ಯಂತ್ರೋಪಕರಣ ಹೂಡಿಕೆಗೆ ನೀಡಬೇಕಾದ ಪ್ರೋತ್ಸಾಹಗಳನ್ನು ಗಮನದಲ್ಲಿರಿಸಿಕೊಳ್ಳುವುದು.

(8) 1990ರ ಅಧಿಸೂಚನೆಯಲ್ಲಿ ವಿವಿಧ ಬಣ್ಣದ ಗ್ರಾನೈಟ್ ಗುತ್ತಿಗೆ ಪ್ರದೇಶಗಳಿಗೆ ನಿಗದಿಪಡಿಸಿದ ಮಿತಿಯನ್ನು ಮುಂದುವರಿಸಿಕೊಂಡು ಹೊಗಲು ಸಾರ್ವಜನಿಕ ಮತ್ತು ಜಂಟಿ ವಲಯಕ್ಕೆ ನೀತಿಯನ್ನು ಸಡಿಲಗೊಳಿಸಿ ಸರ್ಕಾರದ ಮಟ್ಟಕ್ಕೆ ಬಿಡುವುದು.

(9) ಪಟ್ಟಾ ಜಮೀನುಗಳಿಗೆ ಸಂಬಂಧಪಟ್ಟಂತೆ ಪಟ್ಟಾದಾರರಿಗೆ ಅಥವಾ ಒಪ್ಪಿಗೆ ಪಡೆದವರಿಗೆ ನೀಡುವುದು.

(10) ಮಂಜೂರಾದ ಗುತ್ತಿಗೆಯ ದುರುಪಯೋಗ ತಡೆಯಲು ಬಿಗಿಯಾದ ಗುತ್ತಿಗೆ ನಿಬಂಧನೆಗಳನ್ನು ಮಂಡಿಸತಕ್ಕದ್ದು.

(11) ಗುತ್ತಿಗೆ ಅರ್ಜಿಗಳ ವಿಲೇವಾರಿಗೆ ಅಧಿಕೃತ ಸಮಿತಿಯನ್ನು ರಚಿಸುವುದು.

(12) ಗರಿಷ್ಠವಾಗಿ ಅಂದರೆ ನಿಗದಿತ 90 ದಿನಗಳ ಒಳಗೆ ಗುತ್ತಿಗೆ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದು.

(13) ಗ್ರಾನೈಟ್ ಸಾಗಾಣಿಕೆಗೆ ಹಾಲಿ ಕಡ್ಡಾಯವಾಗಿರುವ ರವಾನೆ ಪರ್ಮಿಟ್ ಪದ್ಧತಿಯನ್ನು ಮುಂದುವರಿಸುವುದು.

(14) 1990-91ರ ನಿಯಮದ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ಪ್ರಸ್ತಾಪಿಸಿದ ನೀತಿಯಲ್ಲಿ ಕ್ರಮಬದ್ಧವೆಂದು ಪರಿಗಣಿಸುವುದು ಮತ್ತು ಇವುಗಳನ್ನು ಸಹ ಅರ್ಹತೆಯ ಮೇರೆಗೆ ಗಣನೆಗೆ ತೆಗೆದುಕೊಳ್ಳುವುದು.

ಈ ರೀತಿಯಲ್ಲಿ ನಾವು ವಿಮರ್ಶೆ ಮಾಡಿಕೊಂಡು ಇಲ್ಲಿ ಯಾವುದೇ ರೀತಿಯಾದ ಅಕ್ರಮವಾಗಲೀ,ಯಾವುದೇ ರೀತಿಯಾದ ಬರೀ ರಾ ಫಾರ್ಮಗಳಲ್ಲಿ ರಫ್ತು ಮಾಡತಕ್ಕ ವ್ಯವಸ್ಥೆಯನ್ನು ನಿಲ್ಲಿಸತಕ್ಕ ಒಂದು ನೀತಿಯನ್ನು ಬಹಳ ಇನ್‌ಡೆಫನೆಟ್ ಆಗಿ ಮುಂದುವರೆಸುವುದಕ್ಕೆ ಆಗುವುದಿಲ್ಲ. It is subject to what you are going to propose. ಆದರೆ ಇದನ್ನು ಏನೂ ಮಾಡಬಾರದು, ಸರ್ಕಾರ ಕೈಕಟ್ಟಿ ಕುಳಿತುಕೊಳ್ಳಬೇಕೆಂದರೆ ಸರ್ಕಾರ ಕೆಲಸ ಮಾಡುವುದಕ್ಕಾಗುವುದಿಲ್ಲ. ಈಗ ಒಂದು ಕಡೆ ಸಂಪನ್ಮೂಲ ವ್ಯರ್ಥವಾಗುತ್ತಿದೆ. ಮತ್ತೊಂದು ಕಡೆ ಅಕ್ರಮವನ್ನು ತಡೆಗಟ್ಟುವುದಕ್ಕೆ ನಾವು ಎಷ್ಟು ಬಿಗಿ ಮಾಡಬೇಕೋ ಅದನ್ನು ಮಾಡುತ್ತೇವೆ. ನಾವು ಇಲ್ಲಿಯವರೆಗೆ ಮಾಡಿದ್ದೇವೆ. ಆ ವಿಶ್ವಾಸ ತಮಗೆ ಇರಬಹುದು. ಎರಡನೆಯದು ಏನೆಂದರೆ ಕೈಗಾರಿಕೆಗಳು ಬೆಳೆಯುವುದು ನಿಂತು ಹೋಗುತ್ತದೆ. ಏನಾಗುತ್ತದೆಂದರೆ, a time will come that no processor will come to Karnataka and no industrialist will come to Karnataka. ಇದರಿಂದ ಸಾಕಷ್ಟು ಉದ್ಯೋಗ ನಷ್ಟವಾಗುತ್ತದೆ. ಈಗಾಗಲೇ ಅನೇಕ ಉದ್ಯಮಗಳು ನಿಂತುಹೋಗಿವೆ. ರಿವ್ಯೂ ಮಾಡಲಿಕ್ಕೆ ಆಗುತ್ತಿಲ್ಲ. ರಿನ್ಯೂವಲ್ ಫೀಸು ಕೂಡ ಹೆಚ್ಚು ಮಾಡಬೇಕಾಗಿತ್ತು. ಏಪ್ರಿಲ್ ತಿಂಗಳಿನಲ್ಲಿ ರಿನ್ಯೂವಲ್ ಮಾಡಬೇಕಾಗಿತ್ತು. ಆದ್ದರಿಂದ ಈ ದೃಷ್ಟಿಯಿಂದ ದಯಮಾಡಿ ಇದನ್ನು ಸದನದ ಗಮನಕ್ಕೆ ತಂದೇ ಮಾಡಬೇಕೆಂದು ಹೇಳಿ ಅಂತಹ ಸದುದ್ದೇಶದಿಂದ ನಾವು ತಂದಿದ್ದೇವೆ. ಆದ್ದರಿಂದ ಇದನ್ನು ನಾವು ಚರ್ಚೆ ಮಾಡೋಣ. We are open for discussion on this. ನಿಮ್ಮ ಸಮಿತಿಯಲ್ಲಿ ಮಾತನಾಡಿ. We don't mind but, the Cabinet has taken a decision in this matter. If you want further discussion, call for a meeting at short notice. ದಯಮಾಡಿ ಇದರ ಬಗ್ಗೆ ದೀರ್ಘವಾಗಿ ಚರ್ಚೆಮಾಡಿ. We don't mind. We have approved this proposal. Before issuing the G.O. suppose you feel that this should be again discussed in the Committee, I don't mind. ಆದರೆ ಏನೂ ಮಾಡಬಾರದೆಂದು ಹೇಳಿ ಒಂದು ರೀತಿಯ ನಕರಾತ್ಮಕ ಧೋರಣೆಯನ್ನು ತೆಗೆದುಕೊಳ್ಳುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ರಾಜ್ಯದ ಬೊಕ್ಕಸಕ್ಕೆ ಪ್ರಯೋಜನವಾಗುವುದಿಲ್ಲ. ಈ ಉದ್ಯಮದಲ್ಲಿ ಇದ್ದಂಥ ಕಾರ್ಮಿಕರಿಗೂ ತೊಂದರೆಯಾಗುತ್ತದೆ. ಇಡೀ ಉದ್ಯಮ ಸ್ಥಗಿತವಾಗುತ್ತದೆ. ದಯಮಾಡಿ Let us not go for a negative approach. Please call for a meeting. This is my request

to you. ನಕಾರಾತ್ಮಕವಾಗಿ ಬೇಡ. We will witheld the issue in the Government order. ಬೇಕಾದರೆ ಮಾಟಿಂಗ್ ಕರೆಯಿರಿ. ಕ್ಯಾಬಿನೇಟ್ ಡಿಸಿಷನ್ ಆಗಿದೆ. ನಿಮ್ಮದೂ ಕೂಡ ಸದುದ್ದೇಶ ಇದೆ. ಏಕೆಂದರೆ ಇದರಲ್ಲಿ ಸುಲಿಗೆ ಆಗಬಾರದು, ದರೋಡೆ ಆಗಬಾರದು, ಅಕ್ರಮವಾಗಿ ಕಳ್ಳಸಾಗಾಣಿಕೆ ಆಗಬಾರದು, ರಾ ಫಾರ್ಮ್‌ನಲ್ಲಿ ನಮ್ಮ ಸಂಪನ್ಮೂಲ ಹೊರಗೆ ಹೋಗಬಾರದು. ಇಲ್ಲಿ ವ್ಯಾಲ್ಯೂ ಆಡೆಡ್ ಮಾಡಿಕೊಂಡು ಹೆಚ್ಚುವರಿ ಮೌಲ್ಯ ಬರತಕ್ಕಂಥ ರೀತಿಯಲ್ಲಿ ನಾವು ಇಲ್ಲಿ ಉದ್ದೇಶಪೂರ್ವಕವಾಗಿ ಈ ನೀತಿಯನ್ನು ರೂಪಿಸಿದ್ದೇವೆ. ಈ ಉದ್ದೇಶಕ್ಕೆ ಪೂರಕವಾಗಿಲ್ಲದೇ ಇದ್ದರೆ, ದಯಮಾಡಿ You give your suggestions. I think, within, within 15-20 days, please convene a meeting. This is my suggestion I am giving. We are not going to hurry up necessarily. We should look into the interest of the industries and we should look into the interest of the labourers. ಏಕೆಂದರೆ ಇದು ಅವರ ಅನ್ನದ ಪ್ರಶ್ನೆ. ನಾವು ಇಲ್ಲಿ ಕುಳಿತುಕೊಂಡು ನಮ್ಮದೇ ರೀತಿಯಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಇದು ಪರಸ್ಪರ ಪೂರಕವಾಗಿರುತ್ತದೆ. We have taken a cabinet decision. ಅದಕ್ಕೆ ನಾವು ಈ ಸದನದ ಗಮನಕ್ಕೆ ತಂದೇ ಮುಂದೆ ನಾವು ಅನುಷ್ಠಾನ ಮಾಡೋಣ ಎನ್ನುವ ಸದುದ್ದೇಶದಿಂದ ತಂದಿದ್ದೇನೆ. ಆದರೆ ನಕಾರಾತ್ಮಕವಾದಂಥ ಪ್ರವೃತ್ತಿಯನ್ನು ನಾವು ಇಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲವೆಂಬ ಮಾತನ್ನು ಮಾತ್ರ ತಮ್ಮ ಗಮನಕ್ಕೆ ತಂದು ಇದನ್ನು ತಮ್ಮ ಗಮನಕ್ಕೆ ಒಪ್ಪಿಸಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ನಮ್ಮದು ನಕಾರಾತ್ಮಕ ಭಾವನೆ ಇಲ್ಲ. ಆದರೆ ನಾನು ಏನು ಸಲಹೆ ಮಾಡುತ್ತಿದ್ದೇನೆ ಎಂದರೆ, ಕೈಗಾರಿಕೆಗಳು ಬೆಳೆಯಬೇಕು, ಸರ್ಕಾರಕ್ಕೆ ಸಂಪನ್ಮೂಲಗಳು ಬೇಕು. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮುಖ್ಯಮಂತ್ರಿಗಳಿಗೆ ಏನು ಹೇಳುತ್ತಿದ್ದೇನೆ ಎಂದರೆ, ತಾವು ಎಂಪ್ಲಾಯ್‌ಮೆಂಟ್ ಜನರೇಷನ್ ಆಗಬೇಕು ಎಂದು ಎಲ್ಲಾ ಹೇಳಿದ್ದೀರಿ. ಇದನ್ನು ತಾವು ಪ್ರಪೋಸಲ್ ಎಂದು ಹೇಳಿದ್ದೀರಿ. ಪ್ರಪೋಸಲ್ ಕ್ಯಾಬಿನೇಟ್ ಸಬ್‌ಕಮಿಟಿ ಮುಂದೆ ಚರ್ಚೆಯಾಗಲಿ. ಇದಕ್ಕೆ ಏನು ಕಮಿಟಿ ಮಾಡಿದ್ದೇವೆ, ಅದರಲ್ಲಿ ಎರಡು ತಿಂಗಳು ಟೈಮ್ ತೆಗೆದುಕೊಳ್ಳಿರಿ, ಚರ್ಚೆಯಾಗಲಿ. ಅದರಲ್ಲಿ ಏನಾದರೂ ನಾವು ಚರ್ಚೆ ಮಾಡಿ ಸಲಹೆ, ಸೂಚನೆ ಮಾಡುತ್ತೇವೆ. ಅದರಂತೆ ಸರ್ಕಾರ ಬೇಕಾದರೆ ಪಾಲಿಸಿ ಡ್ರಾ ಮಾಡಬಹುದು. ನಾನು ಏನು ಸಲಹೆ ಮಾಡುತ್ತಿದ್ದೇನೆ ಎಂದರೆ, ತಾವು ಈಗ ಏನು ಪ್ರಪೋಸ ಇಡುತ್ತಿದ್ದೀರಿ, Let this proposal go before the Granite Joint House Committee as suggested by you. ಒಂದು ವರ್ಷ ಟೈಮ್ ಕೊಡಿ ಎಂದು ನಾವು ಹೇಳುವುದಿಲ್ಲ. ಕಮಿಟಿ ಮುಂದೆ ಚರ್ಚೆ ಮಾಡುತ್ತೇವೆ. ಚರ್ಚೆಯಲ್ಲಿ ಏನಾದರೂ ಸೂಚನೆ ಕೊಡುವುದಿದ್ದರೆ in the interest of the State exchequer ನಾವು ಕೊಡುತ್ತೇವೆ. ಅದನ್ನು ತಾವು ಗಮನದಲ್ಲಿಟ್ಟು ಕೊಂಡು ಜಾರಿಗೆ ತರಬಹುದು. ಆದರೆ minimum you give us 2 months time. ಅದರೊಳಗೆ ನಾವು ಮಾಡಿಕೊಡುತ್ತೇವೆ.

(ಶ್ರೀ ಶಿವಾನಂದ ಹೆಚ್. ಕೌಜಲಗಿ ಅವರು ಅಧ್ಯಕ್ಷಪೀಠವನ್ನಲಂಕರಿಸಿದರು)

* ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದು ನನಗೆ ಏನು ಅನ್ನಿಸುತ್ತದೆ ಎಂದರೆ, ಈ ಸಮಿತಿ ಕೆಲಸ ಮಾಡುವುದರ ಬಗ್ಗೆ ಅವರಿಗೇ ಅನುಮಾನ ಇರಬಹುದೆಂದು ಕಾಣುತ್ತದೆ. ಸಮಿತಿಯಲ್ಲಿ ಸದಸ್ಯರಾಗಿದ್ದುಕೊಂಡು ನಾವು ನಮ್ಮ ಅನುಭವವನ್ನು ಹೇಳಬೇಕಾಗುತ್ತದೆ. ನಾವು ಮಧ್ಯಂತರ ವರದಿ ಕೊಟ್ಟಿದ್ದಕ್ಕೆ ಕಾರಣವೇನೆಂದರೆ, ಅದಕ್ಕಿಂತ ಮೊದಲು ಹತ್ತಾರು ಸಭೆಗಳನ್ನು ಕರೆದಿದ್ದೇವೆ. ಎಲ್ಲಾ ಇಲಾಖೆಯ ಅಧಿಕಾರಿಗಳನ್ನೂ ಕರೆದಿದ್ದೇವೆ. ಪೋಲೀಸ್ ಇಲಾಖೆ, ಮೋಟಾರ್ ವೆಹಿಕಲ್ಸ್ ಇಲಾಖೆಯ ಅಧಿಕಾರಿಗಳನ್ನು ಕರೆದಿದ್ದೇವೆ. ಅಡ್ವೋಕೇಟ್ ಜನರಲ್ ಅವರನ್ನು ಕರೆದಿದ್ದೇವೆ. ಮತ್ತೆ ಪಿ.ಡಬ್ಲ್ಯೂ.ಡಿ ಇಲಾಖೆಯ ಅಧಿಕಾರಿಗಳನ್ನು ಕರೆದಿದ್ದೇವೆ. ಹೀಗೆ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಕೆರೆದು ಚರ್ಚೆ ಮಾಡಿ, ಅಪಾರವಾದ ಪ್ರಮಾಣದಲ್ಲಿ ಕಳ್ಳಸಾಗಾಣಿಕೆ ಏನು ನಡೆಯುತ್ತಿತ್ತು. ಅದನ್ನು ನಿಲ್ಲಿಸುವ ಬಗ್ಗೆ ತೀವ್ರವಾದ ಆಲೋಚನೆ ಮಾಡಿ ನಾವು ಒಂದು ಮಧ್ಯಂತರ ವರದಿಯನ್ನು ಕೊಟ್ಟಿದ್ದೇವೆ. ಆದ್ದರಿಂದ ಕಳ್ಳಸಾಗಾಣಿಕೆ ಬಹಳ ಮಟ್ಟಿಗೆ ನಿಂತಿದೆ. ಆದರೆ ಇವತ್ತು ಕೈಗಾರಿಕೆ ನಿಂತಿದೆ ಎಂದು ಅರ್ಥಬರತಕ್ಕಂಥ ರೀತಿಯಲ್ಲಿ ಮಾತನಾಡಿದರೆ, ಈ ಸದನದ ಸಮಿತಿ ಕೆಲಸ ಮಾಡಿತಕ್ಕಂಥಾದ್ದರ ಬಗ್ಗೆ It is a reflection cast on the JOint House Committee. ಇಂಡಸ್ಟ್ರೀ ನಿಂತಿದೆ, ಸಾವಿರಾರು ಜನರಿಗೆ ಕೆಲಸ ಇಲ್ಲವೆಂದು ಹೇಳುವುದಾದರೆ ಇದರ ಅರ್ಥ ಏನಾಗುತ್ತದೆ? ಆ ಮಾತನ್ನು ನೀವು ಬಳಸಬಾರದಾಗಿತ್ತು. ಈ ಅಭಿಪ್ರಾಯಕ್ಕೆ ಸರ್ಕಾರ ಬರಬಾರದಾಗಿತ್ತು ಎಂಬುದು ನನ್ನ ಅಭಿಪ್ರಾಯ. ಶ್ರೀ ರಾಜಶೇಖರಮೂರ್ತಿ ಅವರು ಸಹ ಇಲ್ಲಿ ಕುಳಿತ್ತಿದ್ದಾರೆ.

4.55 ಪಿ.ಎಂ.

ಇದೇ ಮಾನ್ಯ ರಾಜಶೇಖರಮೂರ್ತಿಯವರು ಅಬಕಾರಿ ಮಂತ್ರಿಗಳಾಗಿದ್ದಾಗ, ಈ ರಾಜ್ಯದಲ್ಲಿ ಸೆಕೆಂಡ್ಸ್ ವ್ಯವಹಾರ ಯಥೇಚ್ಚವಾಗಿ ನಡೆಯುತ್ತಿದೆ ಎನ್ನತಕ್ಕ ಮಾತನ್ನು ಹೇಳಿದರು. ನಮ್ಮ ರಾಜ್ಯದಿಂದ ಹೊರಗಡೆ ಹೋಗುತ್ತಿರುವುದಕ್ಕೆ ಎಕ್ಸ್‌ಪೋರ್ಟ್ ಫೀಯನ್ನು ಎರಡು ರೂಪಾಯಿಯಿಂದ ಇಪ್ಪತ್ತು ರೂಪಾಯಿಗೆ ಏರಿಸಿದಿರಿ. ತಾವು ಆವತ್ತಿನದಿವಸ ಪ್ರಬಲವಾಗಿ ಪ್ರತಿಪಾದನೆ ಮಾಡಿದಿರಿ. ಇಲ್ಲಿ ಸೆಕೆಂಡ್ಸ್ ವ್ಯವಹಾರ ಆಗುತ್ತಿದೆ ಎನ್ನತಕ್ಕಂಥ ಪ್ರತಿಪಾದನೆ ಮಾಡಿದಿರಿ. ಮತ್ತು ಅದನ್ನು ನಿಲ್ಲಿಸತಕ್ಕ ಪ್ರಯತ್ನವನ್ನೂ ಮಾಡಿದಿರಿ. ಇದು ಈ ಸದನದಲ್ಲಿ ಗಮನ ಸೆಳೆಯುವ ಸೂಚನೆ ಮುಖಾಂತರ ಚರ್ಚೆಗೆ ಬಂದಾಗ, ಆಗ ಉತ್ತರವನ್ನು ಕೊಟ್ಟಂಥ ಮಾನ್ಯ ಬಂಗಾರಪ್ಪನವರ ಧಾಟಿಗೂ, ಇವತ್ತು ನೀವೇನು ಧಾಟಿಯಲ್ಲಿ ಉತ್ತರ ಕೊಡುತ್ತಿದ್ದೀರೋ ಇದಕ್ಕೂ ಏನೂ ವ್ಯತ್ಯಾಸ ಇಲ್ಲ. ಹಿಂದೆ ಅವರು ಯಾವ ಧಾಟಿಯಲ್ಲಿ ಉತ್ತರ ಕೊಟ್ಟರೋ, ಅದೇ ಧಾಟಿಯಲ್ಲಿ ನೀವೂ ಉತ್ತರ ಕೊಡುತ್ತಿದ್ದೀರಿ. ಇದು ನನಗಂತೂ ಪರಮಾಶ್ಚರ್ಯ. ಇವತ್ತಿನ ದಿವಸ ನೀವು ಆ ಸ್ಥಾನದಲ್ಲಿ ಕುಳಿತುಕೊಂಡು, ಈ ತರಹ ಸದನದ ಸಮಿತಿಯ ಮೇಲೆ ಮತ್ತು ಇಂಡಸ್ಟ್ರಿ ನಿಂತುಹೋಗಿದೆ, ಮತ್ತೆ ಸಾವಿರಾರು ಜನರಿಗೆ ಕೆಲಸ ಇಲ್ಲ ಎನ್ನತಕ್ಕಂಥ

ರೀತಿಯಲ್ಲಿ ಇವತ್ತು ಅವರ ಪರವಾಗಿ ಏನು ವಾದವನ್ನು ಮಂಡಿಸುತ್ತಿದ್ದೀರಿ, ಇದಕ್ಕೂ ಹಿಂದಿನ ಸದನದಲ್ಲಿ ಮಾನ್ಯ ಬಂಗಾರಪ್ಪನವರು 20 ರೂಪಾಯಿ ಇದ್ದುದನ್ನು 2 ರೂಪಾಯಿಗೆ ಇಡತಕ್ಕಂಥ ಇಂಗಿತವನ್ನು ಹೇಳಿ, ಚರ್ಚೆ ಮಾಡಿದ ಸಂದರ್ಭದಲ್ಲಿ ಯಾವ ರೀತಿ ಉತ್ತರವನ್ನು ಕೊಟ್ಟರೋ ಇವೆರಡಕ್ಕೂ ನನಗಂತೂ ವ್ಯತ್ಯಾಸ ಕಾಣುತ್ತಾ ಇಲ್ಲ. ಏಕೆ ಈ ರೀತಿಯ ಮಾರ್ಪಾಡಾಯಿತು ಎಂದು ಖಂಡಿತವಾಗಿಯೂ ಆಶ್ಚರ್ಯವಾಗುತ್ತದೆ. ಇವತ್ತಿನ ದಿವಸ, ಸದನದ ಸಮಿತಿಯ ಮೇಲೆ, ಒತ್ತಡ ತರತಕ್ಕ ಪ್ರಯತ್ನ ಏನು ನಡೆಯುತ್ತಿದೆ ಇದು ಸರ್ವಥಾ ಸರಿಯಾದುದಲ್ಲ. ಕಾರ್ಯಾಂಗ ತನ್ನಮಿತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಶಾಸಕಾಂಗದ ಮೇಲೆ ಈ ರೀತಿಯ ಒತ್ತಡ ತರತಕ್ಕಂಥದ್ದು, ನೀವು ಸಲಹೆಯನ್ನು ಕೊಟ್ಟು, ಆ ಸಲಹೆಯನ್ನು ಎಕ್ಸಾಮಿನ್ ಮಾಡಿ ಎಂದು ಹೇಳತಕ್ಕಂತಾದ್ದು, ನೀವು ಪರಿಶೀಲನೆ ಮಾಡಿ ಎನ್ನತಕ್ಕ ಮಾತನ್ನು ಹೇಳತಕ್ಕಂತಾದ್ದು, ಈ ರೀತಿಯ ಒತ್ತಡ ತರುವುದು ಸರಿಯಲ್ಲ. ಈ ಹೇಳಿಕೆಯನ್ನು ವಾಪಸ್ ಪಡೆಯಬೇಕು, ನಿರ್ಭೀತಿಯಿಂದ, ಒತ್ತಡರಹಿತವಾದ ರೀತಿಯಲ್ಲಿ ಸದನದ ಸಮಿತಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ವಿನಂತಿಸುತ್ತೇನೆ.

*ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶ ಮಾಡಿ, ಸರ್ಕಾರದ ನೀತಿ ಮತ್ತು ಸಚಿವ ಸಂಪುಟದಲ್ಲಿ ಆಗಿರತಕ್ಕಂಥದ್ದನ್ನು ಇಲ್ಲಿ ಸ್ಪಷ್ಟಪಡಿಸಿ, ತಮ್ಮ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಕ್ಕೂ ಮುಂಚೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಚಿವರು, ಯಾರಿಗೂ ಹೇಳದೇ, ಕೇಳದೇ, ನಾವು ಎಲ್ಲೋ ಕುಳಿತಿದ್ದಾಗ, ಮೆಲ್ಲಗೆ ಒಂದು ಹೇಳಿಕೆಯನ್ನು ಕೊಟ್ಟು ಹೊಗೋಣವೆಂದು ಅಂದುಕೊಂಡಿದ್ದರೆಂದು ಕಾಣುತ್ತದೆ. ಏಕೆಂದರೆ, ಅವರು ಸರಸರನೆ ಗಬಗಬನೆ ಓದಿ ಹೇಳಿದರು. 2 ನಿಮಿಷವೂ ನಿಲ್ಲಿಸಲೇ ಇಲ್ಲ. ನಿಲ್ಲಿಸಿದರೆ ಏನಾದರು ಆಕಾಶದಿಂದ ಬಾಂಬ್ ಬಿದ್ದು ಹೋಗುತ್ತದೆಯೇ? ನೀವು ಎಷ್ಟು ವೇಗವಾಗಿ ಹೋಗುತ್ತೀರೆಂದರೆ, ಎಲ್ಲಿ ತಡೆದು ನಿಲ್ಲಿಸಿ ಬಿಡುತ್ತಾರೋ ಅಥವಾ ನೀವೇನೋ ಸರ್ಕಾರವನ್ನು ಉದ್ಧಾರ ಮಾಡುವಹಾಗೆ, ಈ ರಾಜ್ಯಕ್ಕೆ ಅನುಕೂಲ ಮಾಡುವ ರೀತಿಯಲ್ಲಿ ಹೇಳಿಕೆಯನ್ನು ಓದಿದರು. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯ ಮನವಿ ಮಾಡುತ್ತೇನೆ. ಸುಮಾರು 204 ಜನ ಗ್ಯಾನೈಟ್ ಕಲ್ಲಿನ ದರೋಡೆಕೋರರಿಗೆ, ಒಂದೇ ದಿನ, ಒಂದೇ ರಾತ್ರಿ ಕಲ್ಲು ತೆಗೆಯತಕ್ಕ ಪರವಾನಗಿಯನ್ನು ಸರ್ಕಾರ ಕೊಟ್ಟಿದೆ ಎನ್ನತಕ್ಕ ಗುರುತರವಾದ, ಆಪಾದನೆ ಮಾಡಿದೆವು. ನೀವು ಈ ರೀತಿ 204 ಜನರಿಗೆ ಕೊಟ್ಟಿರುವುದು ಸರಿಯಲ್ಲವೆಂದು ಸದನದಲ್ಲಿ ತೀವ್ರವಾದ ಪ್ರತಿಭಟನೆ ಮಾಡಿದೆವು, ಆಗ ನೀವು ಸಂಸದೀಯ ಸಚಿವರಾಗಿದ್ದೀರಿ. ನಿಮ್ಮ ದಾರಿ ಚೆನ್ನಾಗಿ ಹೋಗುತ್ತಿತ್ತು, ಏಕೋ ಕೆಳಗಡೆ ಬೀಳುತ್ತಿದ್ದೀರಿ. ನಿಮ್ಮ ಆಡಳಿತದ ಮೇಲೆ ಇವತ್ತು ಅನುಮಾನಗಳ ಮೇಲೆ ಅನುಮಾನಗಳು ಬರುತ್ತಿವೆ. ಇವತ್ತು ಹೇಳಿಕೆ ಕೊಟ್ಟ ಮೇಲೆ ಸಂಶಯಗಳು ಬರುತ್ತಿವೆ. ನಿಮ್ಮ ಆಡಳಿತ ಮೇಲಕ್ಕೆ, ಆಕಾಶಕ್ಕೆ ಹೋಗುತ್ತಿದ್ದರೆ, ನಾವು ಸಂತೋಷದಿಂದ ಮೆಚ್ಚುತ್ತಿದ್ದೆವು. ಇವತ್ತು ಬಡವರು, ಕಾರ್ಮಿಕರು ಬೀದಿಗೆ ಬಿದ್ದಿದ್ದಾರೆ. ನಿಮ್ಮ ಕಿವಿಗೆ ಇದನ್ನೆಲ್ಲಾ ಹೇಳುವವರು, ನಿಮಗೆ ಒಳ್ಳೆಯ ತೈಲ ಹಚ್ಚತಕ್ಕವರು ಯಾರೆಂದರೆ, ಅಲ್ಲಿ ಕುಳಿತಿರತಕ್ಕಂಥ ಅಧಿಕಾರಿಗಳು. ನೀವು ಅವರ

ಸುಳಿಗೆ ಸಿಕ್ಕಿದ್ದೀರಿ. ತಮ್ಮಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತಿದ್ದೇನೆ. ನೀವು ತಪ್ಪು ತಿಳಿದುಕೊಳ್ಳಬಾರದು. ನಿಮ್ಮ ಬಗ್ಗೆ ಪ್ರಾಮಾಣಿಕವಾದ ಅಭಿಮಾನ ಇಟ್ಟುಕೊಂಡು ಮಾತನಾಡುತ್ತಿದ್ದೇನೆ. ಈ ವಿಚಾರದಲ್ಲಿ ನಾನು ಬಹಳ ನೋವು ಪಡುತ್ತಿದ್ದೇನೆ. ಹತ್ತಾರುವರ್ಷಗಳಿಂದ ಈ ಲಾಭಿಯನ್ನು ನಿಲ್ಲಿಸಬೇಕೆಂದು, ನಿಸರ್ಗ ಸಂಪತ್ತನ್ನು ಸಂರಕ್ಷಣೆ ಮಾಡಬೇಕೆಂದು ನಾನು ನಿರಂತರವಾಗಿ ಹೋರಾಟ ಮಾಡಿದ್ದೇನೆ. ತಮ್ಮ ಮೂಲಕ, ಸರ್ಕಾರದವರಿಗೆ ಹೇಳುತ್ತೇನೆ. ಇವತ್ತು ಕಾರ್ಮಿಕರ ಬಗ್ಗೆ ಕಳಕಳಿ ಇದೆಯೆಂದು ಹೇಳುತ್ತಾರೆ. ಹಾಗಿದ್ದರೆ ಕೃಷ್ಣರಾಜೇಂದ್ರ ಮಿಲ್ ಮುಚ್ಚಿ ಎಷ್ಟು ವರ್ಷವಾಯಿತು, ಜಾವಾ ಕಾರ್ಖಾನೆ ಮುಚ್ಚಿ ಎಷ್ಟು ವರ್ಷವಾಯಿತು. ಕರ್ನಾಟಕ ರಾಜ್ಯದಲ್ಲಿ ಸುಮಾರು 13 ಲಕ್ಷ ಕಾರ್ಮಿಕರು ವಿವಿಧ ಖಾಸಗಿ ಮತ್ತು ಅನೇಕ ಸರ್ಕಾರಿ ಕಾರ್ಖಾನೆಗಳನ್ನು ಮುಚ್ಚಿರುವ ಪ್ರಯುಕ್ತ ಬೀದಿಯಲ್ಲಿ ಭಿಕ್ಷೆ ಎತ್ತುತ್ತಿದ್ದಾರೆ. ನಿಮಗೆ ಆ ಕಾರ್ಮಿಕರ ಬಗ್ಗೆ ಚಿಂತನೆ ಬರಲಿಲ್ಲ. ಇಲ್ಲಿ ಕೆಲವು ದರೋಡೆಕೋರರು ಯಾವುದೋ ರೂಪದಲ್ಲಿ ಕಾರ್ಖಾನೆ ಇಟ್ಟುಕೊಂಡು ಅಲ್ಲಿ ಕಲ್ಲುಗಳನ್ನು ಪಾಲಿಷ್ ಮಾಡಿ ಆ ಪಾಲಿಷ್ ಮಾಡಿದ ದೊಡ್ಡದೊಡ್ಡ ಕಲ್ಲುಗಳನ್ನು ವಿದೇಶಕ್ಕೆ ಕಳುಹಿಸತಕ್ಕಂಥ ಮತ್ತೊಂದು ರೂಪ ಇದು. ಇಂತಹವರ ಮೇಲೆ ನಿಮಗೆ ಕರುಣೆ ಹೇಗೆ ಬಂತು? ಕಟುಕರಿಗೂ ಸಹ ಇವರ ಬಗ್ಗೆ ಕರುಣೆ ಬರುವುದಿಲ್ಲ. ಆದರೆ ನಿಮ್ಮಂತಹ ಹೃದಯ ಇರತಕ್ಕಂಥ ಮನುಷ್ಯರಿಗೆ ಇವರ ಮೇಲೆ ನಿಮಗೆ ಕರುಣೆ ಬಂತು ಎಂದು ಹೇಳಿದರೆ ನನಗೆ ಬಹಳ ಅತ್ಯಂತ ಆಶ್ಚರ್ಯ ಆಗುತ್ತಿದೆ. ಅದು ನಿಮಗೆ ಬರಬಾರದು. ನಿಮಗೆ ಬಂತು ಅಂದರೆ ಯಾರಾದರೂ ನಿಮಗೆ ಪರಕಾಯ ಪ್ರವೇಶ ಮಾಡಿರಬೇಕು. ಈ ಮಾತನ್ನು ನಿಮ್ಮ ಬಾಯಿಂದ ಹೇಳಿಸಬೇಕಾದರೆ, ಈ ಮಾತು ಇವತ್ತು ಸದನದಲ್ಲಿ ಬಂತು, ಅದು ಕಡತಕ್ಕೆ ಹೋಗಿವೆ. ಅದು ಕಡತಕ್ಕೆ ಹೋಗಿದೆ. ಅದು ಹೋಗಬಾರದು. ಏಕೆಂದರೆ ನೀವು ಒಂದು ವೇಗದಲ್ಲಿ ಹೋಗುತ್ತಿದ್ದೀರಿ. ಬಹಳ ದೊಡ್ಡ ವೇಗದಲ್ಲಿ ಈ ರಾಜ್ಯದಲ್ಲಿ ಏನೋ ತಾವು ಒಂದು ಸಿದ್ಧಾಂತ ಇಟ್ಟುಕೊಂಡು ಕೆಲಸ ಮಾಡಬೇಕೆಂದು ಹೊರಟಿದ್ದೀರಿ. ನಾವು ಇಲ್ಲಿ ವಿರೋಧಪಕ್ಷದಲ್ಲಿ ಕುಳಿತುಕೊಂಡು ಅನೇಕ ವಿಚಾರಗಳಲ್ಲಿ ಸಂಪೂರ್ಣವಾದ ಬಹಿರಂಗ ಬೆಂಬಲವನ್ನುಕೊಟ್ಟಿದ್ದೇವೆ , ಸಂತೋಷ ಪಡುತ್ತೇವೆ. ಈ ಗ್ರಾನೈಟ್ ಬಗ್ಗೆ ನೀವು ಕಾರ್ಖಾನೆಗಳ ಸ್ಥಾಪನೆ, ಕಾರ್ಮಿಕರಿಗೆ ತೊಂದರೆ ಆಗಿದೆ ಎಂದು ಹೇಳಿದಿರಿ. ಸ್ವಾಮಿ ಈ ಕಲ್ಲುಗಳನ್ನು ಎಷ್ಟು ವರ್ಷ ತೆಗೆಯಬಹುದು ಸ್ವಾಮಿ. ನಮ್ಮ ಕರ್ನಾಟಕದಲ್ಲಿರುವ ಗ್ರಾನೈಟ್ ಕಲ್ಲುಗಳು ಎಷ್ಟು ದಿವಸಗಳ ಕಾಲ ತೆಗೆಯಬಹುದು ಎಂದು ನಿಮಗೆ ಏನಾದರೂ ಮಾಹಿತಿ ಇದೆಯೇ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನೇರವಾಗಿ ಕೇಳುತ್ತಿದ್ದೇನೆ. ಈ ಗ್ರಾನೈಟ್ ಕಲ್ಲು ಇದೆಯಲ್ಲಾ, ಇದು ಬೆಳೆಯುವ ವಸ್ತು ಅಲ್ಲ; ತಯಾರು ಮಾಡುವ ಸಾಮಾನು ಅಲ್ಲ; ಆದರೆ ನಾನು ತಮಗೆ ಹೇಳುತ್ತಿದ್ದೇನೆ, ನಾನು ವಿವರಕ್ಕೆ ಹೋಗುವುದಿಲ್ಲ. ಅದು ಇರಲಿ, ಈಗ ತಾವು ಏನೊಂದು ಎರಡು ಮೂರು ಎಂದು ಇಪ್ಪತ್ತು ಸೂತ್ರಗಳನ್ನು ಓದಿದ್ದೀರಿ, ಒಂದು ನೀವು ಈ ಸಂಸದೀಯ ಸಚಿವರಿಗೆ ಸಂಸದೀಯ ಕಾರ್ಯಕಲಾಪಗಳಲ್ಲಿ ಬಹಳ ಗೌರವವನ್ನು ಇಟ್ಟುಕೊಂಡಿರತಕ್ಕಂಥವರು. ಈ ಸದನವೇ ಒಂದು ಸಮಿತಿಯನ್ನು ಮಾಡಿತು. ಇದರಲ್ಲಿನ ಭ್ರಷ್ಟಾಚಾರವನ್ನು ಬಯಲು ಮಾಡಿಬೇಕು ಅಂತ ಹೇಳಿ ಈ ಸದನದ ಸಮಿತಿಯನ್ನು ತಾವು ರಚನೆ ಮಾಡಿ ಈಗ ನೀವು ಏನು ಹೇಳುತ್ತಿದ್ದೀರಿ ಅಂದರೆ, ನಾವು

ಈ ರೀತಿ ಸಚಿವ ಸಂಪುಟದ ತೀರ್ಮಾನ ಮಾಡಿಕೊಂಡಿದ್ದೇವೆ, ನಿಮಗೆ ಬೇಕಾದ್ದರೆ ಒಂದು ತಿಂಗಳು ಟೈಮ್ ಕೊಡುತ್ತೇವೆ; ನೀವು ಮಾಡುವುದಾದರೆ ಒಂದು ತಿಂಗಳಲ್ಲಿ ಮಾಡಿ; ಮಾಡಲಿಲ್ಲ ಅಂದರೆ ನಾವು ಬೇರೆ ಕ್ರಮಕ್ಕೆ ಹೋಗುತ್ತೆವೆ ಎನ್ನುವ ಧಾಟಿ ನಿಮ್ಮದು. ಈಗಾಗಲೇ ಈ ಸದನದ ಸಮಿತಿಯ ವ್ಯಾಪ್ತಿಯನ್ನು 6 ತಿಂಗಳು ಮುಂದುವರಿಸಿದ್ದಾರೆ ಮಾನ್ಯ ಅಧ್ಯಕ್ಷರು ಅದು ತಮ್ಮ ಗಮನಕ್ಕೆ ಬರಲಿ. ನೀವು ಏನು ಹೇಳುತ್ತಿದ್ದೀರಿ ಅಂದರೆ ನಾವು ಈಗ ತೀರ್ಮಾನ ತೆಗೆದುಕೊಂಡಿದ್ದೇವೆ, ಆದ್ದರಿಂದ ದಯಮಾಡಿ ನೀವು ಒಂದು ತಿಂಗಳಲ್ಲಿ ಅದನ್ನು ಮುಗಿಸಿ ಎಂದು. ತಾವು ಇದನ್ನು ಹೇಳಬಹುದೇ? ಈ ಮಾತನ್ನು ತಾವು ಒಪ್ಪುತ್ತೀರಾ? ಆದರೆ ತಮಗೆ ನಾನು ಹೇಳುತ್ತಿದ್ದೇನೆ, ನಿಮ್ಮ ಅಧಿಕಾರಿಗಳು ನಿಮ್ಮನ್ನು ದಾರಿ ತಪ್ಪಿಸುತ್ತಿದ್ದಾರೆ. ಸದನದ ಸಮಿತಿಯ ಬಗ್ಗೆ ನಿಮಗೆ ಗೌರವ ಇದ್ದರೆ ಸದನದ ಸಮಿತಿ ಅಂತಿಮ ವರದಿ ಕೊಡುವವರೆಗೂ ಸದನದ ಸಮಿತಿ ಜೊತೆಯಲ್ಲಿ ತಾವು ಸಹಕರಿಸಿ. ಇಲ್ಲಾ ಎನ್ನುವುದಾದರೆ ಸದನದ ಸಮಿತಿಯೇ ಬೇಡ; ಇವತ್ತೇ ಮುಚ್ಚಿಬಿಡಿ. ಇವತ್ತು ನಾವು ಸದನದ ಸಮಿತಿಯನ್ನು ಒಪ್ಪುವುದಿಲ್ಲ ಎನ್ನತಕ್ಕಂಥ ಮಾತನ್ನು ಸರ್ಕಾರ ಇವತ್ತು ಹೇಳಲಿ. ಇಲ್ಲದಿದ್ದರೆ ನಮಗೇನೂ ಬೇಕಾಗಿಲ್ಲ ಒಂದು ಕಡೆ ಮಸೂದೆಯನ್ನು ತಂದಿದ್ದಿರಿ ಕ್ರಾಂತಿಕಾರಕವಾಗಿ ನಾವು ಏನು ಸಲಹೆ ಕೊಟ್ಟೆವೋ,ಅದನ್ನು ತಿದ್ದುಪಡಿ ಮಸೂದೆ ರೂಪದಲ್ಲಿ ಈ ಸದನದಲ್ಲಿ ತಂದಾಗ ನಿಮ್ಮ ಸರ್ಕಾರಕ್ಕೆ ಶಹಭಾಸ್‌ಗಿರಿ ಕೊಟ್ಟೆವು. ಕಂದಾಯ ಇಲಾಖೆಯ ಸಚಿವರು ಆಗ ಪಟ್ಟಾಭೂಮಿಯಲ್ಲಿರತಕ್ಕಂಥ ಕಲ್ಲುಗಳು ಸರ್ಕಾರದ ವಸ್ತು ಅಂದಾಗ ನಾವು ಸಂತೋಷ ಪಟ್ಟೆವು. ಇವತ್ತು ಅದಕ್ಕೆ ತದ್ವಿರುದ್ಧವಾದಂತಹ ರೀತಿ ನೀತಿಗಳನ್ನು ತಾವು ಹೇಳಿಕೊಂಡಿದ್ದೀರಿ ಮತ್ತೊಂದು ಕಡೆ ಅವರ ಹೇಳಿಕೆ ಹೇಳದೆ ಕೇಳದೆ ಈ ರೀತಿ ಹೇಳಿಕೆಯನ್ನು ಮಾಡಿರತಕ್ಕಂಥಾದ್ದು ಸರಿಯಲ್ಲ. ನಾನು ತಮಗೆ ಸ್ಪಷ್ಟವಾಗಿ ಕೇಳುತ್ತಿದ್ದೇನೆ, ಸದನದ ಸಮಿತಿ ಇರಬೇಕೇ ಬಿಡಬೇಕೇ ಎಂಬುದು ಇವತ್ತು ತೀರ್ಮಾನ .ಆಗಿಬಿಡಲಿ ಇವತ್ತು ಈ ಕ್ಷಣದಲ್ಲಿ ತೀರ್ಮಾನ ಆಗಬೇಕು ಸದನದ ಸಮಿತಿ ಬೇಡ ಅಂದ್ರೆ, ಅಧ್ಯಕ್ಷರಿಗೆ ಸಮಿತಿ ಬೇಡ ಅಂತ ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಚರ್ಚೆ ಮಾಡುವಂತಹ ಅಗತ್ಯ ಇಲ್ಲ ಎರಡು ಸೆಂಟೆನ್ಸ್ ಇದೆ. ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು. ಗುತ್ತಿಗೆ ಪಡೆಯಲು ಸಲ್ಲಿಸುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಒಂದು ಅಧಿಕೃತ ಸಮಿತಿಯನ್ನು ರೂಪಿಸಲು ಪರಿಶೀಲಿಸಲಾಗುವುದು. ಎರಡನೆಯದು ಸರ್ಕಾರವು ಮೇಲೆ ತಿಳಿಸಿದಂತೆ ನಿಯಮಗಳನ್ನು ರಚಿಸಿ ಜಾರಿಗೊಳಿಸಲಾಗುವುದು; ಸದನದ ಸಮಿತಿ ನೀಡುವ ಶಿಫಾರಸ್ಸುಗಳಿಗೆ ಹೆಚ್ಚಿ ನ ಆಧ್ಯತೆಯನ್ನು ನೀಡಲಾಗುವುದೆಂದರೆ ಏನು? ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳಿಗೆ ನಾನು ಹೇಳುವಂತಹ ಅಗತ್ಯ ಇಲ್ಲ ಎಂದು ಅಂದು ಕೊಂಡಿದ್ದೇನೆ. ಸದನದ ಸಮಿತಿಯನ್ನು ನಾವು ಒಳ್ಳೆ ಉದ್ದೇಶದಿಂದ ಮಾಡಿದ ಮೇಲೆ ಅವರು ವರದಿ ಕೊಡುವುದಕ್ಕಿಂತ ಮುಂದೆ ಇಷ್ಟು ತರಾತುರಿ ಏಕೆ ಸ್ವಾಮಿ? ತಾವು ಹೇಳಿದಿರಿ ಇವತ್ತು ಗ್ರಾನೈಟ್ ಕಲ್ಲು ಅಲ್ಲಿದೆ. ದಿನೇ ದಿನೇ ಅದಕ್ಕೆ ಬೆಲೆ ಜಾಸ್ತಿಯಾಗುತ್ತದೆಯೇ ಹೊರತು ಕಡಿಮೆ ಆಗುವುದಿಲ್ಲ. ಒಂದು ಅಡಿ ಕಲ್ಲು ಸಹ ತೆಗೆಯಬಾರದು, ಅದು ಸರ್ಕಾರದ ಆಸ್ತಿಯಾಗಿ ಉಳಿಯಬೇಕು ಎನ್ನುವ ಅಪೇಕ್ಷೆ ನಮಗೆ ಇದೆ.

ಅದಕ್ಕಾಗಿ ಸದನದ ಸಮಿತಿಯನ್ನು ರಚನೆ ಮಾಡಿದ್ದೇವೆ. ಎಲ್ಲಾ ರಾಜ್ಯಗಳಿಗೂ ನಾವು ಹೋಗಿ ಬಂದಿದ್ದೇವೆ. ಸ್ವಾಮಿ, ಈ ತರಾತುರಿಯಲ್ಲಿ ನೀವು ಕ್ರಮ ತೆಗೆದುಕೊಂಡರೆ ಒಂದು ಕಪ್ಪು ಚುಕ್ಕೆ ನಿಮ್ಮ ಮೇಲೆ ಬರುತ್ತಿದೆಯೆಂದು ನಾನು ಹೇಳುತ್ತಿದ್ದೇನೆ. ಒಂದು ಸದನ ಸಮಿತಿಯನ್ನು ರಚನೆ ಮಾಡಿ ಅವರು ಪೂರ್ಣ ವರದಿಯನ್ನು ಕೊಡುವುದಕ್ಕಿಂತ ಮುಂಚೆ, ಈ ರೀತಿಯಾಗಿ ಸರ್ಕಾರವು ಸ್ಟೇಟ್‌ಮೆಂಟ್ ಮಾಡಿದ್ದು ಇತಿಹಾಸದಲ್ಲಿಯೇ ಇಲ್ಲ. ನಿನ್ನೆ ಚರ್ಚೆ ಮಾಡುವ ಕಾಲದಲ್ಲಿ ಮುಖ್ಯಮಂತ್ರಿಗಳು 8ನೇ ತಾರೀಖು ನಮಗೆ ಶುಭ ದಿವಸ ಎಂದು ಹೇಳಿದ್ದಾರೆ. ಆದರೆ ನಿಮಗೆ 8ನೇ ತಾರೀಖು ಶನಿಕಾಟ ಪ್ರಾರಂಭವಾಯಿತು. ನೀವು ಪರೋಕ್ಷವಾಗಿ ಗ್ರಾನೈಟ್ ಕಲ್ಲು ಸಾಗಾಣಿಕೆದಾರರಿಗೆ ಸರ್ಕಾರದ ಮುದ್ರೆ ಒತ್ತಿ ಲೈಸನ್ಸ್ ಕೊಡುತ್ತಾ ಇದ್ದೀರಿ. ನಾನು ನಿಮ್ಮ ದೃಷ್ಟಿಯಿಂದ, ಈ ನಾಡಿನ ಜನರ ದೃಷ್ಟಿಯಿಂದ ನಮ್ಮ ಸಂಪನ್ಮೂಲಗಳು ಉಳಿಯುವ ದೃಷ್ಟಿಯಿಂದ ಕೈ ಮುಗಿದು ಕೇಳಿಕೊಳ್ಳುತ್ತಿದ್ದೇನೆ; ಕೋಟ್ಯಾಂತರ ರೂಪಾಯಿಗಳಷ್ಟು ಪುಟ ಲೂಟಿಯಾಗುತ್ತಿರುವಂಥ ಈ ಹಗಲುದರೋಡೆ ನಿಲ್ಲಬೇಕೆಂಬ ಕಳಕಳಿ ನಮಗೆ ಇದೆ, ನಿಮ್ಮ ಪಕ್ಷದವರೂ ನಮ್ಮ ಜೊತೆಗೆ ಇದ್ದಾರೆ. ನಾವುಗಳು ಒಂದು ವರದಿಯನ್ನು ಕೊಡುತ್ತೇವೆ, ಯಾವ ತರಾತುರಿಯೂ ಇಲ್ಲ, ಇದುವರೆಗೂ ನಾವುಗಳು ತಮ್ಮ ಜೊತೆಗೆ ಸಹಕಾರ ಕೊಟ್ಟುಕೊಂಡು ಬಂದಿದ್ದೇವೆ. ಈ ಸ್ಟೇಟ್‌ಮೆಂಟ್ ಮಾಡುವುದಕ್ಕಿಂತ ಮುಂಚೆ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬಹುದಾಗಿತ್ತು. ಒಂದು ಸಭೆಯನ್ನು ಕರೆಯಬಹುದಾಗಿತ್ತು. ಅವೆಲ್ಲವನ್ನೂ ಬಿಟ್ಟು ಇಲ್ಲಿ ಈಗ ಏಕೆ ತರಾತುರಿ ಮಾಡುತ್ತಿದ್ದೀರಿ? ನನಗನ್ನಿಸುತ್ತದೆ, ಕಾಂಗ್ರೆಸ್‌ನ ನಿಯಮ ಹಳೆಯ ಕಲ್ಚರ್ ಇತ್ತಲ್ಲಾ, ಅದು ಮೊದಲನೇ ಹೆಜ್ಜೆ, ಇದಕ್ಕೆ ತಕ್ಕಂಥ ವಿವರಗಳನ್ನು ನೀವು ಇಟ್ಟಿದ್ದೀರಿ, ಅದರ ಬಗ್ಗೆ ನಾನು ಚರ್ಚೆ ಮಾಡಲು ಇಷ್ಟ ಪಡುವುದಿಲ್ಲ. ಇದರ ಮೂಲಕ ನೀವು ಗ್ರಾನೈಟ್ ಕಳ್ಳ ಸಾಗಾಣಿಕೆದಾರರಿಗೆ ಪರೋಕ್ಷವಾಗಿ ಬೆಂಬಲಕೊಡಲು ಹೊರಟಿದ್ದೀರಿ. ಅವೊತ್ತು ಏನು ಅಷ್ಟು ಜನರಿಗೆ ರಾತ್ರೋರಾತ್ರಿ ಲೈಸೆನ್ಸ್ ಕೊಟ್ಟಿದ್ದೀರೋ, ಅಂಥವರಿಗೆ ಈಗಲೂ ಇನ್ನೊಂದು ರೀತಿಯಲ್ಲಿ ಬೆಂಬಲವನ್ನು ಕೊಡುತ್ತಾ ಇದ್ದೀರಿ, ಹಾಗೆ ಕೊಡಬೇಡಿ, ದಯಮಾಡಿ ಇದನ್ನು ವಾಪಸ್ ತೆಗೆದುಕೊಳ್ಳಿ. ಅದನ್ನು ಬಿಟ್ಟು ಇದನ್ನೇ ಮುಂದುವರಿಸುತ್ತೇವೆ ಅಂದರೆ ಅದು ನಿಮ್ಮ ಹಣೇ ಬರಹ ; ಬಹುಶಃ ಇದರಿಂದ ನಿಮಗೆ ಒಳ್ಳೆಯದಾಗುವುದಿಲ್ಲ ಎಂದು ಹೇಳಬೇಕಾಗುತ್ತದೆ. ಇದನ್ನು ವಾಪಸ್ ಪಡೆದರೆ, ಸರಕಾರಕ್ಕೆ ಗೌರವ ಬರುತ್ತದೆ. ಹೀಗೆ ಆದರೆ ಮಾನ್ಯ ಅಧ್ಯಕ್ಷರೇ, ಈ ಸಮಿತಿಯನ್ನು ತಾವು ವಜಾ ಮಾಡಿ. ನಾನಂತೂ ಅಲ್ಲಿ ಕೆಲಸ ಮಾಡಲು ಸಿದ್ಧನಿಲ್ಲ. ಇದನ್ನು ನೀವು ಇವೊತ್ತು ಸದನದಲ್ಲಿ ಆಕ್ಸೆಪ್ಟ್ ಮಾಡಿಕೊಳ್ಳಿ. ಆ ಸಮಿತಿಯ ಸದಸ್ಯತ್ವಕ್ಕೆ ನಾನು ರಾಜಿನಾಮೆ ಕೊಡುತ್ತೇನೆ. ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ನಾನು ಈ ಸಮಿತಿಯಲ್ಲಿ ಕೆಲಸ ಮಾಡುವುದಿಲ್ಲ. ಯಾಕೆಂದರೆ ನಮಗೆ ಸರಿಯಾದ ಅಧಿಕಾರವನ್ನು ಅದರಲ್ಲಿ ಕೊಟ್ಟಿಲ್ಲ. ತೋರಿಕೆಗೆ ಒಂದು ಸಮಿತಿ ಮಾಡಿ ಇಲ್ಲಿ ಏನೋ ಹಾರಿಸುವುದಕ್ಕೆ ಪ್ರಯತ್ನ ಮಾಡಿದರು. ನಾವು ಗಟ್ಟಿಯಾಗಿ ಹಿಡಿದುಕೊಂಡೆವು. ತಾವು ವಿರೋಧಿ ಪಕ್ಷದ ನಾಯಕರುಗಳನ್ನು ಕೇಳಿ; ಈ ಸರಕಾರ ಬದಲಾವಣೆಯಾಗುತ್ತದೆ, ಮುಖ್ಯ ಮಂತ್ರಿಗಳು ಬದಲಾವಣೆಯಾಗುತ್ತಾರೆ. ಈ ಸದನದ ಸಮಿತಿಯ ಮೂಲಕ ಸರಿಯಾದ ಒಂದು ವರದಿಯನ್ನು ಕೊಡಲು ಉದ್ದೇಶಪೂರ್ವಕವಾಗಿ ನಿಧಾನ ಮಾಡಿದ್ದೇವೆ. ಯಾಕೆಂದರೆ, ಹೊಸ ಮುಖ್ಯಮಂತ್ರಿಯವರು ಬರುತ್ತಾರೆ ಆಗ

ಏನಾದರೂ ಬದಲಾವಣೆಯಾಗುತ್ತದೆ, ನಮ್ಮ ಮಾತಿಗೆ ಬೆಲೆ ಬರುತ್ತದೆ ಎಂದು ನಿಧಾನ ಮಾಡಿದ್ದೇವೆ. ಆದರೂ ನೀವು ಈಗಲೂ ತಪ್ಪು ದಾರಿಯನ್ನು ಹಿಡಿಯಲು ಹೋಗುವುದಾದರೆ ಅದು ನಿಮ್ಮ ಇಷ್ಟ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ನಾನು ಮಾತನಾಡಿದ್ದನ್ನು ಸ್ವಲ್ಪ ಅರ್ಥಮಾಡಿಕೊಂಡು ಮಾತನಾಡಬೇಕು. ರಾಜಕೀಯವಾಗಿ ಮಾತನಾಡಬೇಕೆಂದು ತಮಗೆ ಇಚ್ಛೆ ಇದ್ದರೆ ಹಾಗೆ ಮಾತನಾಡಲು ನಾವು ಅಡ್ಡಿ ಬರುವುದಿಲ್ಲ. ಯಾಕೆಂದರೆ, ಇದು ನಾನು ಒಬ್ಬರನ್ನು ಕುರಿತು ಹೇಳುತ್ತಿಲ್ಲ. ನಾನು ಒಂದು ವಿಶ್ವಾಸದಿಂದ ಈ ಮಾತುಗಳನ್ನು ಆಡುತ್ತಿದ್ದೇವೆ. ಇದು ಇಲ್ಲದಿದ್ದರೆ ನಾವು ಏತಕ್ಕೆ ಮಾತನಾಡಬೇಕು? ವಸ್ತುಸ್ಥಿತಿಯನ್ನು ಅರ್ಥಮಾಡಿಕೊಂಡು ವಿಚಾರವನ್ನುನಾವು ತಮ್ಮ ಮುಂದಿಟ್ಟಿದ್ದೇವೆ. We could have taken a decision - to be frank with you. ರೆಸಲ್ಯೂಷನ್ ಇದೆ. ಅದನ್ನು ತಾವುಗಳು ದಯಮಾಡಿ ನೋಡಬೇಕು. I am not coming in the way but still we would like that policy. ಅದರ ಬಗ್ಗೆ ಪಾಲಿಸಿಯನ್ನು ಏನು ಮಾಡಬೇಕೋ, ಅದನ್ನು ತಾವುಗಳು ವರದಿಯನ್ನು ಕೊಟ್ಟ ಮೇಲೆ, ಮಾಡಬೇಕೆಂದು ಉದ್ದೇಶದಿಂದ ನಾವಿದ್ದೇವೆ. ಬೇರೆ ಬೇರೆ ಕಾರಣಗಳಿಂದ ಮುಖ್ಯವಾಗಿ ಈ ಉದ್ಯಮಗಳ ದೃಷ್ಟಿಯಿಂದ, ನಾವು ಒಂದು ಪಾಲಿಸಿಯನ್ನು ತಂದಿದ್ದೇವೆ. ಈ ಸಮಿತಿಯನ್ನು ಮಾಡಿ ಬಹಳ ಸಮಯವಾಯಿತು. ಪರಿಸರ ಮತ್ತು ನಿರ್ಣಯ ಇಲ್ಲಿ ಆದುದ್ದು. ದಯಮಾಡಿ ತಾವುಗಳು ವಸ್ತುಸ್ಥಿತಿಯನ್ನು ತಿಳಿದುಕೊಳ್ಳಬೇಕು. ಈ ಸದನದ ವಿರುದ್ಧವಾಗಿ, ಸಮಿತಿಯ ವಿರುದ್ಧವಾಗಿ ವಿಶ್ವಾಸವಿಲ್ಲದೆ ಏನೋ ಮಾಡಿಕೊಂಡಿದ್ದೇವೆ ಎಂದು ದಯಮಾಡಿ ಅರ್ಥಮಾಡಿಕೊಳ್ಳಬೇಡಿ. 'ಪರಿಸರ ಮತ್ತು ಬೀದಿ ಪರಿಸರದ ಮೇಲೆ, ಕನಿಷ್ಠ ಪರಿಣಾಮವನ್ನು ಬೀರುವ, ಸುವ್ಯವಸ್ಥಿತ ಮತ್ತು ವೈಜ್ಞಾನಿಕ ಕಲ್ಲುಗಣಿ ಕೆಲಸಕ್ಕಾಗಿ ಒಂದು ಬೃಹತ್ ಸಮಾಚೀನ ದೃಷ್ಟಿಯ ನೀತಿಯನ್ನು ಸೂಚಿಸಲು ಹಾಗೂ ಮೌಲ್ಯಭರಿತ ಖನಿಜಗಳ ರಫ್ತಿಗೆ ಒಂದು ಸೂಕ್ತ ಒತ್ತು ಮತ್ತು ಅದರಿಂದ ಬರುವ ಕಂದಾಯದ ವಸೂಲಿಗಾಗಿ ಕ್ರಮಗಳನ್ನು ಸೂಚಿಸುವುದು.' This is the reference. ಇದನ್ನು ನಾವು ಕೊಟ್ಟಿದ್ದೇವೆ. ಇದೊಂದು ವ್ಯಾಪಕವಾದಂಥ ಒಂದು ನೀತಿ. ಈಗ ನಾವು ಏನು ಪಾಲಿಸಿಯನ್ನು ತಂದಿದ್ದೇವೆ; ಅದು ತಾತ್ಕಾಲಿಕವಾದುದು; ಅದು ಇಂಟೀರಿಯಮ್ ಆಗಬಹುದು. That will be interim policy subject to the ultimate policy which will be suggested by you. ನಾವು ಇದನ್ನು ವಿಚಾರ ಮಾಡಿ ತಂದಿದ್ದೇವೆ. ನಾವು ಇದನ್ನು ಅನುಷ್ಠಾನ ಮಾಡಬೇಕೆಂದಿದ್ದರೆ ಅನುಷ್ಠಾನ ಮಾಡಬಹುದಾಗಿತ್ತು. We would not have brought it before the House. ಆದರೆ ನಾವು ಅದನ್ನು ಇಲ್ಲಿ ತಂದ ಉದ್ದೇಶವಾದರೂ ಏನು? Let us expose this policy to the House. You must understand the democratic gesture. ಈಗ ತಾವು ತಾತ್ಕಾಲಿಕವಾಗಿ ಒಂದು ವರದಿಯನ್ನು ಕೊಟ್ಟಿದ್ದೀರಿ; ಅದರಲ್ಲಿ ರೆವಿನ್ಯೂ ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳಿದ್ದೀರಿ. ನಮಗೆ ಯಾವುದೇ ಪಟ್ಟಭದ್ರಾಹಿತಾಸಕ್ತಿಗಳ ರಕ್ಷಣೆ ಮಾಡಬೇಕೆಂಬ ಉದ್ದೇಶವಿದ್ದಲ್ಲಿ. ನಾವು ಆ ಅಮೆಂಡ್‌ಮೆಂಟ್‌ನ್ನು ಏಕೆ ಮಾಡಬೇಕಾಗಿತ್ತು? ನಮ್ಮ ಸದುದ್ದೇಶವನ್ನು ತಾವುಗಳು ಅರ್ಥಮಾಡಿಕೊಳ್ಳಬೇಕು. ಯಾಕೆ ಅಮೆಂಡ್‌ಮೆಂಟ್ ತರಬೇಕಾಗಿತ್ತು? We have

brought this amendment. ಇದು ಪಾಲಿಸಿ ಸ್ವಲ್ಪ ತಡವಾಗಿದೆ. At least there should be an interim policy; ಆ ಒಂದು ಸದುದ್ದೇಶದಿಂದ ಸರಕಾರ ಈ ಒಂದು ಹೇಳಿಕೆಯನ್ನು ಮಾಡಿದೆ. ನೀವು 20 ದಿವಸಗಳಲ್ಲಿ ವರದಿಯನ್ನು ಕೊಡುವುದಾದರೆ ನಾವು ಕಾಯುತ್ತೇವೆ, ಇಲ್ಲವಾದರೆ ನಾವು ಬಿಡುತ್ತೇವೆ, ನಾವು ಇಷ್ಯೂ ಮಾಡುತ್ತೇವೆ ; ಈ ಮಾತುಗಳನ್ನು ನಾನು ಹೇಳಲಿಲ್ಲ. ಆದರೆ ತಾವುಗಳು ಹೇಳಿದ್ದೀರಿ, ನಾನು ಹೇಳಲೇ ಇಲ್ಲ. what I have said if you can ನಾನು ಫೈನಲ್ ವರದಿ ಕೊಡಿ ಎಂದು ಹೇಳಲಿಲ್ಲ. ಅದಕ್ಕೆ ತಾವುಗಳು ಎಷ್ಟು ಸಮಯ ಬೇಕೋ ಅದನ್ನು ತೆಗೆದುಕೊಳ್ಳಿ. I am not coming in the way. There should be atleast some interim policy. ಅದನ್ನು ಬಿಟ್ಟು ಇಂಟೀರಿಯಮ್ ಪಾಲಿಸಿಯೂ ಬೇಡ, ಫೈನಲ್ ಪಾಲಿಸಿಯೂ ಬೇಡ, ಅಂದರೆ ಕ್ಷಮಿಸಬೇಕು, ಇದು ನಕಾರಾತ್ಮಕವಾದ ಧೋರಣೆ ಎಂದು ನಾನು ಹೇಳಿದ್ದೇನೆ. I am sorry. I am not convinced. ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ತಮ್ಮವಾದವೇ ಜಾರಿ ಆಗಬೇಕೆಂದು ಹೇಳಿದರೆ ಹೇಗೆ? ಆ ಒಂದು ಪ್ರತಿಷ್ಠೆಯಿಂದ ಮಾತನಾಡುವುದಾದರೆ, I am not going to implement it, I will wait, we are not in a hurry. ನಮಗೆ ಯಾರಿಗಾದರೂ ಲಾಭ ಮಾಡಬೇಕೆಂಬುದು ಇಲ್ಲ. ಒಟ್ಟು ಸಮಗ್ರವಾದ ಆಡಳಿತದ ದೃಷ್ಟಿಕೋನದಿಂದ purely on the merit of the administration. ಅಷ್ಟೇ ಹೇಳಿದ್ದೇನೆ. ಯಾರಿಗೋ ಪಟ್ಟಭದ್ರಹಿತಾಸಕ್ತಿಗಳಿಗೆ ಸಹಾಯ ಮಾಡಬೇಕು, ಲೂಟಿ ಹೊಡೆಯಲು ಏನೋ ಮಾಡಿದ್ದೀರಿ, ಕಪ್ಪುಚುಕ್ಕೆ ನಿಮ್ಮ ಮೇಲೆ ಬಂದಿದೆ ಎಂದೆಲ್ಲಾ ಹೇಳಿದಿರಿ. ಯಾವ ಕಪ್ಪುಚುಕ್ಕೆ ನಮ್ಮ ಮೇಲೆ ಬಂದಿದೆ? ಕಪ್ಪುಚುಕ್ಕೆ ಬರುವುದಿದ್ದರೆ I wouldnot have considered it. For you , I did not indicate time also. 20-25 ದಿವಸಗಳಲ್ಲಿ ಅದನ್ನು ಮಾಡಬೇಕೆಂದು ನಾನು ಹೇಳುವುದಿಲ್ಲ.

(ಸನ್ಮಾನ್ಯ ಅಧ್ಯಕ್ಷರು ವಿ. ಎಸ್. ಕೌಜಲಗಿಯವರು ಅಧ್ಯಕ್ಷ ಪೀಠವನ್ನು ಆಲಂಕರಿಸಿದರು.)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಾನೊಂದು ಸಲಹೆಯನ್ನು ಕೊಡಬಯಸುತ್ತೇನೆ. ಈಗ ತಾವುಗಳು ಕ್ಯಾಬಿನೆಟ್ ಡಿಸಿಷನ್ ಒಂದನ್ನು ತೆಗೆದುಕೊಂಡಿದ್ದೀರಿ. Please don't issue the Government order atleast. ನಿಮ್ಮ ಯಾವ ಸಲಹೆ ಇದೆ ಅದು ಸಮಿತಿಯ ಮುಂದೆ ಬರಲಿ. ಅದನ್ನು ಇಟ್ಟುಕೊಂಡು ಸಮಿತಿಯು ಚರ್ಚೆ ಮಾಡುತ್ತದೆ. ಸಮಿತಿ ತೀರ್ಮಾನವನ್ನು ತಮಗೆ ತಿಳಿಸುತ್ತೇವೆ, ಅದರ ಮೇಲೆ ನೀವು ನಿಮ್ಮ ಕ್ರಮ ತೆಗೆದುಕೊಳ್ಳಿ.

Sri. M. Veerappa Moily : Agreed. Even that kind of an offer I have given. ಅದನ್ನೇ ನಾನು ಹೇಳಿದ್ದು. My request to all of you, ತಾವುಗಳೇ ಆ ಕಾಮಗಾರಿಗಾಗಿ ಹಣ ಕೊಡಿ, ಈ ಕಾಮಗಾರಿಗಾಗಿ ಹಣ ಕೊಡಿ ಎಂದು ಹೇಳುತ್ತಾ ಇರುತ್ತೀರಿ, ಅದನ್ನು ಗಮನಿಸಿ ಈ ಸಂಪನ್ಮೂಲಗಳನ್ನು ನಾವು ಹೀಗೆ ಬ್ಲಾಕ್ ಮಾಡಿಬಿಟ್ಟರೆ, ...

ಶ್ರೀ ಸಿ. ಬೈರೇಗೌಡ : ಬೆಳಿಗ್ಗೆಯಿಂದ ನಿಮ್ಮಿಬ್ಬರ ಜಗಳವನ್ನು ನೋಡಿ ನಮಗೆ ಸಾಕಾಗಿದೆ. ಈಗ ಮತ್ತೆ ಜಗಳವಾಡುವುದು ಬೇಡ. ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆ. ಅದರ ಪ್ರಕಾರ ಮಾಡೋಣ.

ಶ್ರೀ ಎಂ. ವೀರಪ್ಪಮೊಯಿಲಿ : ಆಯಿತು; ಆದಷ್ಟು ಜಾಗ್ರತೆ ಆ ಕೆಲಸವನ್ನು ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಸಂಪನ್ಮೂಲ ಎಂದು ಹೇಳಿದರು. ಇದರ ಬಗ್ಗೆ ನಾವು ಸಮಗ್ರ ಚರ್ಚೆ ಮಾಡುವುದಾದರೆ, ಸಂಪನ್ಮೂಲ ಇದರಿಂದ ಏನು ಇದೆ ಎಂಬುದು ನಿಮಗೆ ಅರ್ಥವಾಗುತ್ತದೆ. ಬೇಕಾದರೆ ನಾವೆಲ್ಲರೂ ತಮ್ಮ ಹತ್ತಿರ ಕುಳಿತುಕೊಂಡು ಮಾತನಾಡುತ್ತೇವೆ. ಚರ್ಚೆಯ ನಂತರ ತಾವುಗಳು ಅದನ್ನು ಒಪ್ಪಬಹುದೆಂದು ನನಗೆ ಅನ್ನಿಸುತ್ತದೆ. ಈ ವಿಚಾರದಲ್ಲಿ ಎಷ್ಟು ಮೋಸ ನಡೆಯುತ್ತಿದೆ ಅಂದರೆ, ಹೀಗೆ ಮುನ್ನೆಡೆದರೆ ಇನ್ನು ಹತ್ತು ವರ್ಷಗಳಲ್ಲಿ ಇದ್ದ ಕಲ್ಲನ್ನೆಲ್ಲಾ ತೆಗೆದುಕೊಂಡು ಹೋಗುತ್ತಾರೆ. ಆಗ ನಿಮಗೆ ಯಾವ ಕೈಗಾರಿಕೆಯೂ ಇಲ್ಲದಂತೆ ಆಗುತ್ತದೆ. ಈ ವಿಚಾರದಲ್ಲಿ ಜಗಳವಾಡಬೇಕೆಂದಿದ್ದರೂ ಕೂಡ ಬೆಳಿಗ್ಗೆ ಅವರವರೇ ಜಗಳವಾಡಿದ್ದಾರೆ. ಹಾಗಾಗಿ ನಾವು ಸುಮ್ಮನೆ ಇದ್ದೇವೆ. ಬೆಳಿಗ್ಗೆಯಿಂದ ನೀವು ಎದ್ದು ಬಂದ ಫಳಿಗೆ ಸರಿಯಾಗಿಲ್ಲ ಎಂದು ಕಾಣುತ್ತದೆ. ನೀವು ಮಂಗಳೂರಿನಿಂದ ಬಂದಿದ್ದೀರಿ, ನೀವು ಯಾರ ಮುಖ ನೋಡಿದ್ದೀರೋ ಗೊತ್ತಿಲ್ಲ. ಆದರೆ ಇಲ್ಲಿ ಬಂದ ತಕ್ಷಣವೇ ಕರ್ನಾಟಕದ ಇತಿಹಾಸದಲ್ಲಿಯೇ ನಡೆಯದೇ ಇರತಕ್ಕಂಥ ಒಂದು ಯುದ್ಧ ನಡೆದಿದೆ. ಬೆಳಿಗ್ಗೆ ಮಹಾ ಯುದ್ಧ ನಡಿದಿದೆ. ಮುಖ್ಯಮಂತ್ರಿಯವರೇ ಇಂದು ಎಂದೂ ನಡೆಯದೆ ಇರತಕ್ಕಂಥ ಮಹಾ ಯುದ್ಧ ನಡೆದಿದೆ. ಆ ಯುದ್ಧ ನಡೆಯದಿದ್ದರೆ ಈಗ ನಾವು ಯುದ್ಧ ಮಾಡೋಣ ಎಂದು ಇದ್ದೆವು. ಅದು ನಡೆದು ಸಾಕಾಗಿದೆ; ಈಗ ನಾವು ನಿಮ್ಮ ಮೇಲೆ ಯುದ್ಧ ಮಾಡತಕ್ಕಂಥ ಪರಿಸ್ಥಿತಿಗೆ ಹೋಗುವುದಿಲ್ಲ. ಮತ್ತು ಅಂತಹ ಯುದ್ಧಕ್ಕೆ ನಾವು ತಯಾರಾಗಿಯೂ ಇಲ್ಲ. ಆ ಪ್ರಶ್ನೆ ಬೇರೆ. ಆದರೆ ಇವತ್ತು ನೀವು ಸ್ವಲ್ಪ ತೆರದ ಮನಸ್ಸಿನಲ್ಲಿ ಇದನ್ನು ನೋಡಿ; ಅಷ್ಟೇ ನಮ್ಮದು ಬೇಡಿಕೆ. ಇನ್ನೇನೂ ಇಲ್ಲ. ನೀವು ತೆರದ ಮನಸ್ಸಿನಲ್ಲಿ ನೋಡಿ ಎಂದು ನಿಮಗೆ ಹೇಳಿದ್ದೇವೆ.

ಶ್ರೀ ಡಿ. ಎ. ಚಿನ್ನಪ್ಪ : ಈ ಪ್ರಪೋಸಲ್‌ನ್ನು ಎರಡು ತಿಂಗಳ ಮುಂಚೆಯೇ ನಾನು ಕಮಿಟಿಯ ಮುಂದೆ ಇಟ್ಟಿದ್ದೇನೆ. ಕೆಲವು ಅಂಶಗಳ ಬಗ್ಗೆ ಚರ್ಚೆ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಒಂದೆರಡು ಹೇಳಿಕೆಗಳನ್ನು ಬೇಗ ಬೇಗ ಮಾಡಿ ಮುಗಿಸುತ್ತೇನೆ.

ಮುಖ್ಯಮಂತ್ರಿಗಳಿಂದ ಹೇಳಿಕೆ.

(ಅ) ವಿಷಯ : ಕುಮಾರಿ ಭಾಗ್ಯರವರು ಕಣ್ಮರೆಯಾದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಎಂ.ಎಲ್.ಎ. ರವರು ಕುಮಾರಿ ಭಾಗ್ಯರವರು ಕಣ್ಮರೆಯಾದ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಕಳುಹಿಸಿರುವ ಸೂಚನೆ. - ಮುಖ್ಯಮಂತ್ರಿಯವರ ಹೇಳಿಕೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಬೀರನ ಹಳ್ಳಿ ಗ್ರಾಮದ ಶ್ರೀ ರಾಚಪ್ಪನ ಮಗಳು ಕು. ಭಾಗ್ಯ 16 ವರ್ಷ ಈಕೆಯು ಹುಣಸೂರಿನಲ್ಲಿ ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ದಿನಾಂಕ 31-3-93ರಂದು ಎಸ್.ಎಸ್.ಎಲ್.ಸಿ. ಪರೀಕ್ಷೆ ಪ್ರಾರಂಭಿಸಿದ್ದು ಈಕೆಯೂ ಬೆಳಿಗ್ಗೆ ಮನೆಯಿಂದ ಹೊರಗೆ ಹೋದವಳು ಪುನಃ ಹಿಂದಿರುಗಿಲ್ಲ. ಬಹಳ ಹೊತ್ತು ಮನೆಗೆ ಮಗಳು ಬಾರದೆ ಇದ್ದುದರಿಂದ ಗಾಬರಿಗೊಂಡ ತಂದೆತಾಯಿಗಳು ಅಕ್ಕಪಕ್ಕದಲ್ಲಿ ಹುಡುಕಿ ಸುಳಿವು ಇಲ್ಲದ ಕಾರಣ ಹುಣಸೂರು ಗ್ರಾಮಾಂತರ ಪೋಲೀಸ್ ಠಾಣೆಗೆ ದೂರು ನೀಡಲಾಗಿ ಅಪರಾಧ ಸಂಖ್ಯೆ : 120:93ರಲ್ಲಿ ವ್ಯಕ್ತಿ ನಾಪತ್ತೆಯಾದ ಬಗ್ಗೆ ನೊಂದಾಯಿಸಿಕೊಂಡು ತನಿಖೆಯನ್ನು ಪ್ರಾರಂಭಿಸಲಾಗಿ ಮಾರನೆಯ ದಿನ ಅಂದರೆ ದಿನಾಂಕ 1-4-93ರ ರಾತ್ರಿ ಸುಮಾರು 8.30 ಗಂಟೆಯ ಸಮಯದಲ್ಲಿ ಕು. ಭಾಗ್ಯಳ ಶವವು ಲಕ್ಷ್ಮಣತೀರ್ಥ ನದಿಯಲ್ಲಿ ತೇಲುತ್ತಿದ್ದು, ಅದನ್ನು ಹೊರತೆಗೆದು ಅದರ ಮೇಲೆ ಪಂಚನಾಮೆ ನಡೆಸಿ ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಒಳಪಡಿಸಲಾಯಿತು. ವೈದ್ಯರ ಪರೀಕ್ಷೆಯ ಆಧಾರದ ಮೇಲೆ ತಿಳಿದುಬಂದಂತೆ ಮೃತಳ ಶರೀರದ ಮೇಲೆ ಯಾವುದೇ ಗಾಯದ ಗುರುತುಗಳು ಕಂಡು ಬಂದಿಲ್ಲ. ಹಾಗೂ ಮೃತಳ ಮೇಲೆ ಯಾವುದೇ ಹಲ್ಲೆ ನಡೆದಿರುವುದಿಲ್ಲ. ವೈದ್ಯಾಧಿಕಾರಿಗಳ ಪರೀಕ್ಷೆಯ ಪ್ರಕಾರ ಕು. ಭಾಗ್ಯಳ ಸಾವು ನೀರಿನಲ್ಲಿ ಮುಳುಗಿ ಉಸಿರುಕಟ್ಟಿರುವುದರಿಂದ ಉಂಟಾಗಿದೆ ಎಂಬ ಅಭಿಪ್ರಾಯಕ್ಕೆ ಬದಲಾಗಿದೆ. ಈ ಎಲ್ಲಾ ಅಂಶಗಳಿಂದ ಈ ಸಾವು ಆಕಸ್ಮಿಕ ಇಲ್ಲವೇ ಆತ್ಮಹತ್ಯೆ ಎಂದು ಶಂಕಿಸಲಾಗಿದೆ. ಆದರೂ ತನಿಖೆಯು ಮುಂದುವರಿಯುತ್ತಿದೆ. ಇದರ ಬಗ್ಗೆ ಸಂಶಯವನ್ನು ಮಾನ್ಯ ನಾಗರಜ್‌ರವರು ವ್ಯಕ್ತಪಡಿಸಿರುವುದರಿಂದ ಇದನ್ನು ನಾವು ಸಿ.ಐ.ಡಿ.ಗೆ ಒಪ್ಪಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾಗವಳ್ಳಿಯ ಗ್ರಾಮದಲ್ಲಿ ನಡೆದ ಘಟನೆಯ ಬಗ್ಗೆ ಹೇಳಿಕೆಯನ್ನು ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ಹೇಳಿದ ಮೇಲೆ ಯಾವ ಹೇಳಿಕೆಯನ್ನೂ ಮಾಡದೇ ಹೋಗುವುದಿಲ್ಲ. ನಾನು ಏನು ಆಶ್ವಾಸನೆಯನ್ನು ಕೊಟ್ಟಿದ್ದೇನೆ, ಆ ಹೇಳಿಕೆಗಳು ನನ್ನ ಹತ್ತಿರ ಇವೆ.